ಮೈಸೂರು ವಿಶ್ವವಿದ್ಯಾನಿಲಯ

# ಮಹಾರಾಜ ಕಾಲೇಜು

## ಮಾಹಿತಿ ಪುಸ್ತಿಕೆ

## ಬಿ.ಎ.,/ಬಿ.ಬಿ.ಎ.,/ಬಿ.ಕಾಂ., ಡಿಗ್ರಿ ಕೋರ್ಸ್‌ಗಳು

## ೨೦೧೮–೨೦೧೯

**ಮೊತ್ತ : ರೂ 250–00**

## ಮೈಸೂರು ವಿಶ್ವವಿದ್ಯಾನಿಲಯ

# ಮಹಾರಾಜ ಕಾಲೇಜು, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯವು ದಕ್ಷಿಣ ಭಾರತದ ಅತ್ಯಂತ ಹಳೆಯ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿದೆ. ಮೈಸೂರಿನ ಅತೀವ ಜನಾನುರಾಗಿ ಹಾಗೂ ಉದಾರಿ ದೊರೆಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮತ್ತು ಆಗಿನ ಮೈಸೂರಿನ ದಿವಾನರೂ ಅಭಿಯಂತರೂ ರಾಜನೀತಿಜ್ಞರೂ ಆಗಿದ್ದ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ – ಇವರಿಬ್ಬರು ಈ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮೂಲ ಕಾರಣಕರ್ತರು. ಈ ವಿಶ್ವವಿದ್ಯಾನಿಲಯವು ೧೯೧೬ರ ಜುಲೈ ೨೭ ರಂದು ಭಾರತದ ಏಳನೆಯ ವಿಶ್ವವಿದ್ಯಾನಿಲಯವಾಗಿ ಮತ್ತು ಮೈಸೂರು ಸಂಸ್ಥಾನದ ಪ್ರಥಮ ವಿಶ್ವವಿದ್ಯಾನಿಲಯವಾಗಿ ಅಸ್ತಿತ್ವಕ್ಕೆ ಬಂದಿತು.

ಮೊದಮೊದಲು ಮಾನವಿಕ ವಿಷಯಗಳಿಗಾಗಿ ಮೈಸೂರಿನಲ್ಲಿ ಮಹಾರಾಜ ಕಾಲೇಜು ಮತ್ತು ವಿಜ್ಞಾನದ ವಿಷಯಗಳಿಗಾಗಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು – ಈ ಎರಡು ಕಾಲೇಜುಗಳನ್ನು ಸರಳವಾಗಿ ಪ್ರಾರಂಭಿಸಿದ ಈ ವಿಶ್ವವಿದ್ಯಾನಿಲಯ ಕ್ರಮೇಣ ಪ್ರೌಢ ವ್ಯಾಸಂಗಗಳ ಸುಪ್ರಸಿದ್ಧ ಕೇಂದ್ರವಾಗಿ ಬೆಳೆಯಿತು. ಇದು ತನ್ನ ನೇರ ಆಡಳಿತಕ್ಕೆ ಒಳಗಾಗಿರುವ ಐದು ಕಾಲೇಜುಗಳು ಸೇರಿದಂತೆ ಸುಮಾರು ೨೦೦ಕ್ಕಿಂತ ಹೆಚ್ಚು ಕಾಲೇಜುಗಳನ್ನು ಒಳಗೊಂಡಿದೆ. ಈಗ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಅನೇಕ ಕಾಲೇಜುಗಳು ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟಿವೆ.

ಆರಂಭದಲ್ಲಿ ಈ ವಿಶ್ವವಿದ್ಯಾನಿಲಯದ ಮೂಲ ಸಂಸ್ಥೆಯಾಗಿದ್ದ ಮಹಾರಾಜ ಕಾಲೇಜು ಇದರ ಅಂಗ ಸಂಸ್ಥೆಯಾಗಿ, ಬಿ.ಎ., ಬಿ.ಕಾಂ., ಬಿ.ಬಿ.ಎ., ಡಿಗ್ರಿ ಕೋರ್ಸ್‌ಗಳ; 'ಸುಧಾರಣ ಆಡಳಿತ'ದಲ್ಲಿ ಎಂ.ಫಿಲ್ ಕೋರ್ಸ್‌ನ; ಅಪರಾಧ ಶಾಸ್ತ್ರ & ನ್ಯಾಯ ವಿಜ್ಞಾನ ಶಾಸ್ತ್ರದಲ್ಲಿ ಎಂ.ಎಸ್‌ಸಿ., ಕೋರ್ಸ್‌ನ; 'ಅಂತರ ರಾಷ್ಟ್ರೀಯ ಸಂಬಂಧಗಳು' (International Relations)ನಲ್ಲಿ ಎಂ.ಎ. ಕೋರ್ಸ್‌ನ ಶಿಕ್ಷಣವನ್ನು ನೀಡುತ್ತಿದೆ.

೧೮೩೩ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಂದ 'ರಾಜಾ'ಸ್ ಫ್ರೀ ಸ್ಕೂಲ್' ಎಂದು ಸಂಸ್ಥಾಪಿಸಲ್ಪಟ್ಟ ಸಂಸ್ಥೆಯು ೧೮೬೪ರಲ್ಲಿ ಪ್ರೌಢಶಾಲಾ ಸ್ತರಕ್ಕೆ ಏರಿ, ನಂತರ ೧೮೭೯ರಲ್ಲಿ ಎರಡನೇ ದರ್ಜೆ ಕಾಲೇಜೆಂದು ಪರಿಗಣಿಸಲ್ಪಟ್ಟು, 'ಮಹಾರಾಜ ಕಾಲೇಜು, ಮೈಸೂರು' ಎಂಬ ಹೆಸರನ್ನು ಪಡೆಯಿತು; ೧೮೯೪ರಲ್ಲಿ ಈಗಿರುವ ಸ್ಥಳಕ್ಕೆ ಸ್ಥಳಾಂತರಿಸಲ್ಪಟ್ಟು ಪರಿಪೂರ್ಣ ಪ್ರಥಮ ದರ್ಜೆ ಕಾಲೇಜಾಗಿ ಆಗಿನಿಂದ ಈಗಲೂ ಶಿಕ್ಷಣ ಕೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ.

೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅನುವು ಮಾಡುವ ಮಸೂದೆಯೊಂದನ್ನು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪನೆ ಮಾಡಲಾಯಿತು. ಇದು ಭಾರತದಲ್ಲಿನ, ಬ್ರಿಟಿಷ್ ಆಡಳಿತಕ್ಕೊಳಪಡದ ಮೊದಲ ವಿಶ್ವವಿದ್ಯಾನಿಲಯವಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯ ನಂತರ ಮಹಾರಾಜ ಕಾಲೇಜು ಅದರ ಅಂಗಸಂಸ್ಥೆಯಾಯಿತು. ಪ್ರೊ|| ಸಿ.ಅರ್. ರೆಡ್ಡಿ ಇದರ ಮೊದಲ ಪ್ರಾಂಶುಪಾಲರಾದರು. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಅಧ್ಯಯನ ಮಾಡಿದ ಡಾ|| ಎನ್.ಎಸ್. ಸುಬ್ಬರಾವ್‌ರವರು ಪ್ರೊ|| ಸಿ.ಆರ್. ರೆಡ್ಡಿ ಬಳಿಕ ಪ್ರಾಂಶುಪಾಲರಾದರು ಇವರ ನಂತರ ಪ್ರಾಂಶುಪಾಲರಾದವರು ಕ್ರಮವಾಗಿ – ಪ್ರೊ|| ಜೆ.ಸಿ.ರೋಲೊ, ಪ್ರೊ|| ಎ.ಬಿ. ಮ್ಯಾಕಿಂತೋಷ್, ಪ್ರೊ|| ಎಸ್.ವಿ. ರಂಗಣ್ಣ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು, ಪದ್ಮಭೂಷಣ ಸಿ.ಡಿ. ನರಸಿಂಹಯ್ಯ, ಪ್ರೊ|| ಕೆ.ಎ. ಖಾನ್, ಪ್ರೊ|| ಶಾಂತವೀರಪ್ಪ, ಪ್ರೊ|| ಕೆ.ಬಿ.ವೈ. ತೋಟಪ್ಪ

ಪ್ರೊ॥ ಜಿ.ಕೆ. ಘೋರಿ, ಪ್ರೊ॥ ಎನ್. ಶಂಕರಲಿಂಗಯ್ಯ, ಪ್ರೊ॥ ಎಲ್. ಎನ್.ಪವಾರ್, ಪ್ರೊ॥ ಎಂ.ಶಿವಲಿಂಗಯ್ಯ, ಡಾ॥ ಎಸ್.ಗುರುರಾಜಾಚಾರ್, ಡಾ॥ ಎಂ.ಬಿ.ಪದ್ಮ, ಪ್ರೊ॥ ಸಿ. ಸರ್ವಮಂಗಳಾ ಬಾಯಿ, ಪ್ರೊ॥ ಕೆ. ಗಾಯತ್ರಿ, ಪ್ರೊ॥ ಹೆಚ್.ಎಸ್. ನಾರಾಯಣಶೆಟ್ಟಿ, ಡಾ॥ ಸಿ.ಬಿ.ರಾಮಚಂದ್ರ. ಈಗ ಡಾ. ಬಿ. ನಾಗರಾಜ ಮೂರ್ತಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಹಾರಾಜ ಕಾಲೇಜಿನ ಪ್ರಾಂಶುಪಾಲರು ಹಾಗೂ ಶಿಕ್ಷಕರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದವರು – ಪ್ರೊ॥ ಎನ್. ಎಸ್.ಸುಬ್ಬರಾವ್, ಪ್ರೊ॥ವಿ.ಎಲ್.ಡಿ'ಸೌಜ, ಡಾ॥ ಕೆ.ವಿ.ಪುಟ್ಟಪ್ಪ, ಪ್ರೊ॥ ಎನ್.ಎ. ನಿಕ್ಕಂ, ಪ್ರೊ॥ ಡಿ. ಜವರೇಗೌಡ, ಪ್ರೊ॥ ಡಿ.ವಿ. ಅರಸ್, ಡಾ॥ ಹೆಚ್.ಎಂ. ನಾಯಕ್, ಪ್ರೊ॥ ಬಿ. ಶೇಕ್ ಅಲಿ, ಡಾ॥ ಡಿ. ಎಂ. ನಂಜುಂಡಪ್ಪ, ಡಾ॥ ಕೆ.ಹೆಚ್. ಚೆಲುವ ರಾಜು, ಡಾ॥ ಎಂ. ಮಾದಯ್ಯ ಮತ್ತು ಡಾ॥ ಯು. ಆರ್. ಅನಂತಮೂರ್ತಿ.

ಈ ಕಾಲೇಜಿನಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ ಹಲವು ಪ್ರಖ್ಯಾತ ವಿದ್ವಾಂಸರುಗಳು – ಪ್ರೊ॥ ಕೆ.ಟಿ.ಷಾ, ಎ.ಆರ್. ವಾಡಿಯಾ, ಮುಂದೆ ಭಾರತದ ರಾಷ್ಟ್ರಪತಿಗಳಾದ ತತ್ತ್ವಶಾಸ್ತ್ರಜ್ಞ ಡಾ॥ ಎಸ್. ರಾಧಾಕೃಷ್ಣನ್, ಪ್ರೊ॥ ಎಂ. ಹಿರಿಯಣ್ಣ (ಸಂಸ್ಕೃತ ವಿಭಾಗ), ಪ್ರೊ॥ ಆರ್.ಕೆ.ಮುಖರ್ಜಿ, ಪ್ರೊ॥ ಎಸ್.ವಿ. ವೆಂಟೇಶ್ವರ, ಪ್ರೊ॥ ಜೆ.ಸಿ. ರೋಲೊ, ಪ್ರೊ॥ ಎ.ಬಿ. ಮ್ಯಾಕಿಂತೋಷ್, ಪ್ರೊ॥ ಬಿ.ಎಂ. ಶ್ರೀಕಂಠಯ್ಯ, ಪ್ರೊ॥ ಡಬ್ಲ್ಯು.ಜಿ. ಈಗಲ್‌ಟನ್, ಆಕಾಶವಾಣಿಯ ಜನಕ ಪ್ರೊ॥ ಎಂ.ವಿ. ಗೋಪಾಲಸ್ವಾಮಿ, ಪ್ರೊ॥ ವಿ.ಎಲ್.ಡಿ'ಸೌಜಾ, ಪ್ರೊ॥ ಎಂ.ಹೆಚ್.ಕೃಷ್ಣ, ಪ್ರೊ॥ ಎ.ಎನ್. ಮೂರ್ತಿರಾವ್, ಪ್ರೊ॥ ಟಿ.ಎಸ್. ವೆಂಕಣ್ಣಯ್ಯ, ಪ್ರೊ॥ ಎ.ಆರ್.ಕೃಷ್ಣಶಾಸ್ತ್ರಿ, ಪ್ರೊ॥ ಟಿ.ಎನ್. ಶ್ರೀಕಂಠಯ್ಯ, ಪ್ರೊ॥ ಎನ್. ಎ. ನಿಕ್ಕಂ, ಪ್ರೊ॥ ವಿ. ಸೀತಾರಾಮಯ್ಯ, ಪ್ರೊ॥ ಎಸ್.ವಿ. ರಂಗಣ್ಣ, ಪ್ರೊ॥ ಜಿ.ಪಿ. ರಾಜರತ್ನಂ, ಪ್ರೊ॥ ಡಿ. ಎಲ್. ನರಸಿಂಹಾಚರ್, ಜ್ಞಾನಪೀಠ ಪುರಸ್ಕೃತ ಕುವೆಂಪು, ಪ್ರೊ॥ ಎಂ.ಶ್ಯಾಮರಾವ್, ಪ್ರೊ॥ ಜಿ. ಹನುಮಂತ ರಾವ್, ಪ್ರೊ॥ ಕೆ.ವಿ. ರಾಘವಾಚಾರ್, ಪ್ರೊ॥ ಎಸ್.ವಿ. ಪರಮೇಶ್ವರ ಭಟ್ಟ, ಪ್ರೊ॥ ಟಿ.ಎ. ಪುರುಷೋತ್ತಮ್, ಪ್ರೊ॥ ಎಂ.ಯಾಮುನಾಚಾರ್ಯ, ಪದ್ಮಭೂಷಣ ಪ್ರೊ॥ ಸಿ.ಡಿ. ನರಸಿಂಹಯ್ಯ, ಮುಂತಾದವರು.

ಶಿಕ್ಷಣ ಮತ್ತು ಸಂಶೋಧನೆಗಳಲ್ಲಿ ಈ ಕಾಲೇಜು ಅತ್ಯುನ್ನತ ಸ್ತರವನ್ನು ಕಾಪಾಡಿಕೊಂಡು ಬಂದಿದೆ. ಈ ಕಾಲೇಜಿನ ಸಮರ್ಥರಾದ ಪ್ರಾಂಶುಪಾಲರು ಮತ್ತು ಬೋಧಕರು ಪ್ರೀತಿಯಿಂದ ವಿದ್ಯಾರ್ಥಿಗಳಿಗೆ ಬೋಧಿಸುತ್ತಾರೆ; ಮಾರ್ಗದರ್ಶನ ಮಾಡುತ್ತಾರೆ; ಜ್ಞಾನಾರ್ಜನೆಯ ಜೊತೆಗೆ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾಗುವ ಮೌಲ್ಯಗಳಾದ ವಿವೇಕ, ಸಾಮರ್ಥ್ಯ, ಕುಶಲತೆ, ಸನ್ನಡತೆ – ಇವುಗಳ ಬಗ್ಗೆಯೂ ಒತ್ತನ್ನು ನೀಡುತ್ತಾರೆ. ಈ ಕಾಲೇಜಿನಿಂದ ಶಿಕ್ಷಣ ಪಡೆದು ಹೊರ ಬಂದ ಸಹಸ್ರಾರು ವಿದ್ಯಾರ್ಥಿಗಳು ನಮ್ಮ ನಾಡಿನಲ್ಲಿಯೂ ಹೊರ ನಾಡಿನಲ್ಲಿಯೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸಕ್ರಿಯವಾಗಿ ನೇರವಾಗಿ ಹಾಗೂ ಪ್ರಭಾವ ಬೀರುವ ಲೇಖನಗಳ ಮೂಲಕ ಈ ಕಾಲೇಜಿನ ಶಿಕ್ಷಕರೂ ವಿದ್ಯಾರ್ಥಿಗಳೂ ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿರುವುದನ್ನು ಮರೆಯುವಂತಿಲ್ಲ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅದ್ವಿತೀಯ ಪ್ರತಿಭೆಯಿಂದ ವಿಶಿಷ್ಟ ಸಾಧನೆ ಮಾಡಿ ಕೀರ್ತಿವಂತರಾಗಿ ಕಾಲೇಜಿನ ಕೀರ್ತಿಯನ್ನು ಜಗತ್ತಿನಲ್ಲಿ ಎಲ್ಲಡೆ ಹರಡಿರುವ ಮಹನೀಯರುಗಳನ್ನು ಹೆಸರಿಸುವುದಾದರೆ – ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಆರ್.ಕೆ. ನಾರಾಯಣ್, ಆರ್.ಕೆ. ಲಕ್ಷ್ಮಣ್. ಎಂ.ವಿ.ರಾಜಗೋಪಾಲ್, ಎಂ.ಕೃಷ್ಣಸ್ವಾಮಿ, ಎಂ.ಎನ್.ಶ್ರೀನಿವಾಸ್, ಎಲ್. ಶ್ರೀಕಂಠಯ್ಯ, ಜಿ.ಆರ್.ಜೊಯ್ಸರ್, ಡಿ.ಲಕ್ಷ್ಮಣಯ್ಯ, ಎಂ.ಜಿ.ಮೇಖ್ರಿ, ಆರ್.ವಿ.ಮೂರ್ತಿ, ಎ.ಎನ್.ರಾಮರಾವ್, ಹೆಚ್.ರಂಗಾಚಾರ್, ಟಿ.ಎಸ್.ರಾಜಗೋಪಾಲ ಐಯ್ಯಂಗಾರ್, ಎಸ್.ವಿ.ರಂಗಣ್ಣ, ಜೆ.ಎನ್.ರೂಬೆನ್, ಕೆ.ಸೀತಾರಾಮಶಾಸ್ತ್ರಿ, ಎಸ್.ಎಲ್.ಎನ್.ಸಿಂಹ, ಸಿ.ವಿ.ಶ್ರೀನಿವಾಸ ಮೂರ್ತಿ, ಹೆಚ್.ಸುಬ್ಬರಾವ್, ಮೊಹಮದ್ ಇಸಮಾಇಲ್ ಶರೀಫ್,

ಆರ್. ವೆಂಕಟರಾಮಯ್ಯ, ಟಿ.ಎಸ್. ಸತ್ಯನ್, ಎಂ.ಎನ್.ಜೋಯಿಸ್, ಹೆಚ್.ವೈ.ಶಾರದಾಪ್ರಸಾದ್, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ಎಸ್.ಎಲ್.ಭೈರಪ್ಪ, ದೇವನೂರು ಮಹಾದೇವ, ತ.ಸು. ಶಾಮರಾವ್, ಡಿ.ಆರ್. ಕೃಷ್ಣಮೂರ್ತಿ, ಕೆ.ವಿ.ಸುಬ್ಬಣ್ಣ,, ಪ್ರೊ|| ಬ್ರಹ್ಮಾನಂದ, ಹೆಚ್.ಸಿ.ದಾಸಪ್ಪ, ಸಿ.ಜೆ.ದೇವನಾಥ್, ಎ.ಜಿ. ರಾಮಚಂದ್ರರಾವ್, ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ, ಕಡಿದಾಳ ಮಂಜಪ್ಪ, ಜೆ.ಹೆಚ್. ಪಟೇಲ್, ಎಸ್.ಬಂಗಾರಪ್ಪ, ಎಸ್.ಎಂ.ಕೃಷ್ಣ; ಕರ್ನಾಟಕದ ವಿಧಾನಸಭಾಪತಿಯಾದ ಕೃಷ್ಣ; ಕೇಂದ್ರ ಮತ್ತು ರಾಜ್ಯ ಸಚಿವರುಗಳಾಗಿದ್ದ ಎಂ.ಎಸ್. ಗುರುಪಾದ ಸ್ವಾಮಿ, ಬಿ.ಕೆ.ಚಂದ್ರಶೇಖರ್, ಹೆಚ್.ನಂಜೇಗೌಡ, ಹರಿಹರ ಶಿವಪ್ಪ, ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ, ಪೊಲೀಸ್ ವರಿಷ್ಠಾಧಿಕಾರಿಯೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರೂ ಆಗಿದ್ದ ಡಾ|| ಪಿ.ಎಸ್.ರಾಮನುಜಂ, ಭಾರತದ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಇ.ಎಸ್.ವೆಂಕಟರಾಮಯ್ಯ ಮುಂತಾದವರು.

ಈ ಕಾಲೇಜಿನ ಭವ್ಯ ಶಿಷ್ಯ ಪರಂಪರೆಯವರು ಕೇಂದ್ರ ಹಾಗೂ ರಾಜ್ಯ ಸಚಿವರಾಗಿ, ಸಂಸತ್ತು, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್ತುಗಳ ಸದಸ್ಯರಾಗಿ, ಅಧ್ಯಕ್ಷರುಗಳಾಗಿ, ವಿವಿಧ ಮಂಡಳಿಗಳ ಅಧ್ಯಕ್ಷರಾಗಿ ಹಾಗೂ ಸದಸ್ಯರಾಗಿ, ರಾಯಭಾರಿಗಳಾಗಿ, ಉನ್ನತ ಆಡಳಿತಾಧಿಕಾರಿಗಳಾಗಿ, ಪತ್ರಿಕೋದ್ಯಮಿಗಳಾಗಿ, ಸಮಾಜ ಸೇವಾಧುರೀಣರಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಸಾಹಿತಿಗಳಾಗಿ, ಕವಿಗಳಾಗಿ, ವಕೀಲರಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆಸಲ್ಲಿಸುತ್ತಾ ಬಂದಿರುವ ವಿಷಯ ಅತ್ಯಂತ ಪ್ರಶಂಸನಾರ್ಹವಾದುದು.

ಕನ್ನಡ ಭಾಷಾ ಮಾಧ್ಯಮದ ಮೂಲಕ ಜ್ಞಾನದ ವಿವಿಧ ಶಾಖೆಗಳನ್ನು ಕಲಿಸುವ ಕಾರ್ಯದಲ್ಲಿ ಕಂಡುಬಂದಿರುವ ಅದಮ್ಯ ಉತ್ಸಾಹ ಈ ಕಾಲೇಜಿನ ಮೆಚ್ಚತಕ್ಕ ಸಂಗತಿಗಳಲ್ಲಿ ಒಂದಾಗಿದೆ.

ಈ ಕಾಲೇಜಿನಲ್ಲಿ ಬಿ.ಎ., ಪದವಿ ಕೋರ್ಸ್‌ನಲ್ಲಿ ಎರಡು ವೃತ್ತಿಪರ ವಿಷಯಗಳಿವೆ. ಅವು– ಫಂಕ್ಷನಲ್ ಇಂಗ್ಲಿಷ್ (ವ್ಯಾವಹಾರಿಕ ಇಂಗಿಷ್) ಹಾಗೂ ಆರ್ಕಿಯಾಲಜಿ&ಮ್ಯೂಜಿಸಿಯಾಲಜಿ (ಪುರಾತತ್ತ್ವಶಾಸ್ತ್ರ& ವಸ್ತು ಸಂಗ್ರಹಾಲಯ ಶಾಸ್ತ್ರ). ೧೯೯೫ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ನಮ್ಮ ಕಾಲೇಜಿನಲ್ಲೇ ಈ ಎರಡು ವಿಷಯಗಳ ವ್ಯಾಸಂಗವನ್ನು ಆರಂಭಿಸುವುದಕ್ಕೆ ಅನುಮತಿಯನ್ನು ನೀಡಿರುವುದು ಮತ್ತು ದಕ್ಷಿಣಭಾರತದ ಕಾಲೇಜುಗಳಲ್ಲಿ ಈ ವಿಷಯಗಳನ್ನು ಪ್ರಾರಂಭಿಸಿರುವ ಮೊಟ್ಟ ಮೊದಲ ಕಾಲೇಜು ನಮ್ಮದು ಎಂಬುದು ಹೆಮ್ಮೆಯ ವಿಷಯ.

ಮತ್ತೊಂದು ಹೆಮ್ಮಯ ಸಂಗತಿಯೆಂದರೆ – ನಮ್ಮ ಕಾಲೇಜಿನಲ್ಲಿ ಸ್ನಾತಕೋತ್ತರ ಕೋರ್ಸ್‌ಗಳೂ ಕೂಡ ಇವೆ. ಅವು – 'ಸುಧಾರಣ ಆಡಳಿತ' (Correctional Administration)ದಲ್ಲಿ ಎಂ.ಫಿಲ್; 'ಅಪರಾಧ ಶಾಸ್ತ್ರ & ನ್ಯಾಯ ವಿಜ್ಞಾನ' (Criminology & Forensic Science)ದಲ್ಲಿ ಎಂ.ಎಸ್‌ಸಿ.,; ಮತ್ತು 'ಅಂತರ ರಾಷ್ಟ್ರೀಯ ಸಂಬಂಧಗಳು' 'International Relations' ವಿಷಯದಲ್ಲಿ ಎಂ.ಎ.,

ಈ ಕಾಲೇಜಿನಲ್ಲಿ ಕೇವಲ ಅಧ್ಯಯನ ಸಂಶೋಧನೆಗಳಲ್ಲದೆ ಎಲ್ಲ ಬಗೆಯ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳು ಮುಂತಾದ ಎಲ್ಲ ಶೈಕ್ಷಣಿಕ, ಸಹ–ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿಯೂ ನಮ್ಮ ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿ ವೃಂದ ತನ್ನ ನೈಪುಣ್ಯ ಸಾಧಿಸುತ್ತಾ ಬಂದಿದೆ. ಅವರು ಸೃಷ್ಟಿಸುತ್ತಾ ಬಂದಿರುವ ದಾಖಲೆಗಳಿಗೆ ಪ್ರಾಂಶುಪಾಲರ ಕೊಠಡಿಯನ್ನು ಅಲಂಕರಿಸಿರುವ ನಾನಾ ಬಗೆಯ ಪಾರಿತೋಷಕಗಳು, ಫಲಕಗಳು ಜ್ವಲಂತ ಸಾಕ್ಷಿಗಳಾಗಿವೆ.

ಕಾಲೇಜಿಗೆ ಭೇಟಿ ನೀಡಿದ ಐತಿಹಾಸಿಕ ಗಣ್ಯವ್ಯಕ್ತಿಗಳಾದ ನೊಬೆಲ್ ಪ್ರಶಸ್ತಿ ವಿಜೇತ ಗುರುದೇವ ರವೀಂದ್ರನಾಥ ಟಾಗೋರ್, ಶ್ರೀನಿವಾಸ ಶಾಸ್ತ್ರಿ, ಜಿನ್ನಾ, ಕೆ.ಎಂ. ಮುನ್ಷಿ, ಭಾರತದ ಕೊನೆಯ ಗವರ್ನರ್

ಜನರಲ್ ಸಿ. ರಾಜಗೋಪಾಲಾಚಾರಿ, 'ಸಾರೇ ಜಹಾಂ ಸೇ ಅಚ್ಚಾ' ಗೀತದ ರಚನೆ ಮಾಡಿದ ಮೊಹಮ್ಮದ್ ಇಕ್‌ಬಾಲ್, ಪ್ರಸಿದ್ಧ ಇತಿಹಾಸತಜ್ಞ ಆರ್‌ನಾಲ್ಡ್ ಟಾಯ್ನ್‌ಬೀ ಮತ್ತು ಡಿ.ಡಿ. ಕೋಶಾಂಬಿ, ಭಾರತದ ರಾಷ್ಟ್ರಪತಿಯಾಗಿದ್ದ ಝಾಕೀರ್ ಹುಸೇನ್, ಪ್ರಸಿದ್ಧ ಪತ್ರಿಕೋದ್ಯಮ ಮತ್ತು ಸ್ವಾತಂತ್ರ್ಯ ಹೋರಾಟಗಾರ ಟಿ.ಟಿ. ಶರ್ಮಾ ಮುಂತಾದವರನ್ನು ಸ್ವಾಗತಿಸುವ ಸುಸಂದರ್ಭ ಒದಗಿದುದು ಈ ಕಾಲೇಜಿಗೆ ಗೌರವ ತರುವ ವಿಷಯ.

೧೯೫೮ರಲ್ಲಿ ಮಹಾರಾಜ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಸಮಾರಂಭವನ್ನು ಅತ್ಯಂತ ವೈಭವದಿಂದ ಆಚರಿಸಲಾದ ಸುಸಂದರ್ಭದ ಸವಿನೆನಪಿಗಾಗಿ ಕಾಲೇಜಿನ ಆವರಣದಲ್ಲಿ ಕಟ್ಟಲಾಗಿರುವ '**ಶತಮಾನೋತ್ಸವ ಭವನ**' ಎಂಬ ಅನ್ವರ್ಥನಾಮವನ್ನು ಹೊಂದಿರುವ ಭವ್ಯ ಸ್ಮಾರಕ ಭವನವನ್ನು ನಿರ್ಮಿಸಲಾಯಿತು. ಈ ಕಾಲೇಜಿನ ಪ್ರಶಂಸನೀಯ ವಿದ್ಯಾರ್ಥಿಯೂ ಮೈಸೂರಿನ ಮಹಾರಾಜರೂ ಆಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಧನ್ಯವಾದಗಳು. ಇಂದು ಈ ಭವನದ ವಿಶಾಲವಾದ ಸಭಾಂಗಣವು ಎಲ್ಲಾ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾಗಿದೆ. ಆ ವೈಭಯುತ ಶುಭಸಂದರ್ಭದಲ್ಲಿಯೇ ಎಲ್ಲರನ್ನು ತನ್ನ ವಾತ್ಸಲ್ಯಪೂರಿತ ಕಣ್ಣುಗಳಿಂದ ಹರಸುತ್ತಿರುವ, ಅಭಯಹಸ್ತಗಳಿಂದ ಭರವಸೆ ನೀಡುತ್ತಿರುವ **ಸರಸ್ವತೀದೇವಿಯ ವಿಗ್ರಹ**ವನ್ನು ಪ್ರತಿಷ್ಠಾಪಿಸಲಾಯಿತು; ಮತ್ತು ಈ ಕಾಲೇಜು '**ನಹಿ ಜ್ಞಾನೇನ ಸದೃಶಂ**' ಎಂಬ ನಮ್ಮ ವಿಶ್ವವಿದ್ಯಾನಿಲಯದ ಧ್ಯೇಯವಾಕ್ಯಕ್ಕೆ ಸರ್ವವಿಧದಲ್ಲೂ ಅನುಗುಣವಾಗಿ ಶಿಕ್ಷಣಪ್ರಸರಣವನ್ನು ಮಾಡುತ್ತಿದೆ ಎಂಬುದರ ಸಂಕೇತವಾಗಿ ಕಾಲೇಜಿನ ಭವನದ ಪ್ರಸಿದ್ಧ ಶಿಲ್ಪಿ ಶ್ರೀ ಸಿದ್ಧಲಿಂಗಸ್ವಾಮಿಯವರ ಪ್ರೀತಿ ಹಾಗೂ ಗೌರವಯುತ ಕೊಡುಗೆ.

**ಕಾಲೇಜು ಲಾಂಛನ**

ಉದಯರವಿ ನಮ್ಮ ಕಾಲೇಜಿನ ಲಾಂಛನ. ಇದು ಜಾತಿ, ವರ್ಣ ಹಾಗೂ ಪಂಥಗಳ ಭೇದ ಎಣಿಸದೆ ಸೇರಿಸಿಕೊಳ್ಳಲಾಗುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಜ್ಞಾನದ ನಂದಾದೀಪವನ್ನು ಹಚ್ಚಿ ಬೆಳಗಿಸುವುದನ್ನು ಸಂಕೇತಿಸುತ್ತದೆ. ಈ ಲಾಂಛನವು ಆದಿಕವಿ ಪಂಪನ '**ಮನುಷ್ಯ ಜಾತಿ ತಾನೊಂದೆ ವಲಂ**' ಎಂಬ ಧ್ಯೇಯವಾಕ್ಯವನ್ನೊಳಗೊಂಡಿದೆ.

## ಪ್ರಥಮ ದರ್ಜೆ ಕಾಲೇಜಾಗಿ ಶತಮಾನ ದಾಟಿದ ಮಹಾರಾಜ ಕಾಲೇಜಿನ ಯಶೋಗಾಥೆ (೧೮೯೪-೧೯೯೪)

೧೯೯೪ ಮಾಹಾರಾಜ ಕಾಲೇಜಿನಲ್ಲಿ ಪದವಿ ತರಗತಿಗಳ ಆರಂಭದ ಶತಮಾನದ ವರ್ಷ. ೧೮೯೪ರಲ್ಲಿ ಬಿ.ಎ., ಪದವಿ ತರಗತಿಗಳನ್ನು ಆರಂಭಿಸಿ ಮಹಾರಾಜ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಮಾಡಲಾಯಿತು. ಅಲ್ಲಿಯವರೆಗೆ ಅದು ಎರಡನೇ ದರ್ಜೆಯ ಕಾಲೇಜಾಗಿ ಪ್ರೌಢಶಿಕ್ಷಣವನ್ನು ನೀಡುತ್ತಿದ್ದು, ಬಿ.ಎ. ಪರೀಕ್ಷೆಗಳನ್ನು ಮದ್ರಾಸ್ ವಿಶ್ವವಿದ್ಯಾನಿಲಯ ನಡೆಸುತ್ತಿತ್ತು.

ಮೈಸೂರು ಸಂಸ್ಥಾನದ ದಾರ್ಶನಿಕ ಮಹಾರಾಜರಾಗಿದ್ದ ಘನತೆವೆತ್ತ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ೧೮೩೩ರಲ್ಲಿ ಆರಂಭಿಸಿದ್ದ 'ರಾಜಾ'ಸ್ ಫ್ರೀ ಸ್ಕೂಲ್' ಎಂಬ ಶಾಲೆಯೇ ಈ ಕಾಲೇಜಿನ ಆರಂಭಕ್ಕೆ ಬುನಾದಿ. ಮೆಕಾಲೆಯ ಅಭಿವ್ಯಕ್ತಿಗಳಿಂದ ಪ್ರೇರಿತರಾಗಿ ಉದಾರಿಗಳಾದ ಮಹಾರಾಜರು ಈ ಘನಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡರು. ಸಣ್ಣದಾಗಿ ಆರಂಭವಾದ ಈ ಸಂಸ್ಥೆ ಒಂದು ಜ್ಞಾನದೇಗುಲವಾಗಿ ಬೃಹತ್ ಪ್ರಮಾಣದಲ್ಲಿ ಬೆಳೆಯಲು ಕಾರಣ – ಇಲ್ಲಿ ಸೇವೆ ಸಲ್ಲಿಸಿದ ಹಲವು ಘನ ವಿದ್ವಾಂಸರಾದ ಬೋಧಕರು ಮತ್ತು ಇಲ್ಲಿ ಶಿಕ್ಷಣ ಪಡೆದು ಜೀವನದ ನಾನಾ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಿ, ಕೀರ್ತಿಗಳಿಸಿದ ಮಹನೀಯರುಗಳಾಗಿದ್ದಾರೆ.

ಮೈಸೂರಿನ ಮಕ್ಕಳಿಗೆ ಆಂಗ್ಲ ಸಾಹಿತ್ಯ, ಗಣಿತ, ಕನ್ನಡ, ಹಿಂದಿ ಮತ್ತು ಮರಾಠಿ ವಿಷಯಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ 'ರಾಜಾ'ಸ್ ಫ್ರೀ ಸ್ಕೂಲ್'ನ್ನು ಆರಂಭಿಸಲಾಗಿತ್ತು. ಈ ಶಾಲೆಗೆ ಬೇಕಾಗುವ ಹಣವನ್ನು ಮಹಾರಾಜರೇ ಕೊಡುತ್ತಿದ್ದರು. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಸಂಪೂರ್ಣ ಶುಲ್ಕ ರಹಿತವಾಗಿತ್ತು. ಇಂಗ್ಲಿಷ್ ಶಿಕ್ಷಣದ ಬಗ್ಗೆ ನಿರಾಸಕ್ತಿಯಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರುತ್ತಿರಲಿಲ್ಲ. ೧೮೩೫ರಲ್ಲಿ ಈ ಶಾಲೆಯನ್ನು ಉತ್ತಮ ಆಡಳಿತ ಒದಗಿಸುವ ದೃಷ್ಟಿಯಿಂದ ವೆಸ್ಲಿಯನ್ ಮಿಶನ್‌ಗೆ ಹಸ್ತಾಂತರಿಸಲಾಯಿತು. ಅನಂತರ ೧೮೫೦ರಲ್ಲಿ ಆಡಳಿತ ಮಹಾರಾಜರಿಗೆ ಮರಳಿತು. ಸರಿ ಸುಮಾರು ಇದೇ ಅವಧಿಯಲ್ಲಿ ಆಗಿನ ಬ್ರಿಟಿಷ್ ಆಡಳಿತ ಶಿಕ್ಷಣ ನೀತಿಯನ್ನು ಜಾರಿಗೆ ತಂದು ಅದರಲ್ಲಿ ಸರ್ಕಾರ ಶಿಕ್ಷಣದಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಸೂಚಿಸಿತು.

೧೮೬೨ರಲ್ಲಿ ಈ ಶಾಲೆಯನ್ನು ಪ್ರೌಢಶಾಲೆಯ ದರ್ಜೆಗೆ ಏರಿಸಿ, ಶ್ರೀ ಜೇಮ್ಸ್ ಡೆನ್ನಿಂಗ್‌ರವರನ್ನು ಪ್ರಾಂಶುಪಾಲರಾಗಿ ನೇಮಕ ಮಾಡಲಾಯಿತು. ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ೨೭ ಮಾರ್ಚ್ ೧೮೬೮ರಂದು ದೈವಾಧೀನರಾದ ಅನಂತರ, 'ರಾಜಾ'ಸ್ ಫ್ರೀಸ್ಕೂಲ್'ನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಶುಲ್ಕರಹಿತ ವಿದ್ಯಾಭ್ಯಾಸದ ತತ್ತ್ವ ಸರಿಯಲ್ಲ ಎಂಬ ನಿರ್ಧಾರಕ್ಕೆ ಬಂದ ಸರ್ಕಾರ, ವಿದ್ಯಾರ್ಥಿಗಳಿಂದ ಅಲ್ಪ ಪ್ರಮಾಣದ ಶುಲ್ಕ ವಸೂಲು ಮಾಡಲು ಆರಂಭಿಸಿತು. ಆನಂತರದಲ್ಲಿ ಈ ಶಾಲೆ ಮದ್ರಾಸ್ ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟು, ಹತ್ತನೇ ತರಗತಿ ಮತ್ತು ಬಿ.ಎ., ಪರೀಕ್ಷೆಗಳ ಕೇಂದ್ರವಾಗಿ ಪರಿಗಣಿಸಲ್ಪಟ್ಟಿತು. ಬಿ.ಎ., ತರಗತಿಗಳನ್ನು ಆರಂಭಿಸಿ, ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರದ ಕಾರಣ ರದ್ದು ಮಾಡಲಾಯಿತು. ಆದರೆ ಪ್ರೌಢಶಾಲಾ ಮಟ್ಟದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಸಿತು. ೧೮೭೯ರಲ್ಲಿ ಈ ಶಾಲೆಯನ್ನು ಎರಡನೇ ದರ್ಜೆ ಕಾಲೇಜೆಂದು ಪರಿಗಣಿಸಿ, **'ಮಹಾರಾಜ ಕಾಲೇಜು, ಮೈಸೂರು'** ಎಂದು ನಾಮಕರಣ ಮಾಡಿ ಶ್ರೀ ಸಿ.ಎಂ. ಲಿಯಾನಾರ್ಡ್ ಅವರನ್ನು ಪ್ರಾಂಶುಪಾಲರಾಗಿ ನೇಮಿಸಲಾಯಿತು.

೧೮೮೪ರಲ್ಲಿ ಶ್ರೀ ಹೆಚ್. ಜೆ. ಬಾಬಾ ಎಂ.ಎ., ಅವರು ಪ್ರಾಂಶುಪಾಲರಾದರು. ಅವರು, ಮಹಾರಾಜರ ಆಶಯದಂತೆ, ಈ ಕಾಲೇಜನ್ನು ಪ್ರಥಮ ದರ್ಜೆಗೆ ಮುಂಬಡ್ತಿ ಮಾಡುವಂತೆ ಆಗಿನ ಗೌರ್ನರ್ ಜನರಲ್‌ರವರಿಗೆ ಮನವಿ ಸಲ್ಲಿಸಿದರು. ಶ್ರೀ ಬಾಬಾರವರು ಪ್ರಾಂಶುಪಾಲರಾಗಿದ್ದ ಕಾಲದಲ್ಲಿ ಈ ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶಗಳನ್ನು ಪಡೆದರು. ಆಗಿನ ಮದರಾಸು ವಿಶ್ವವಿದ್ಯಾನಿಲಯದ ಅಧೀನದಲ್ಲಿದ್ದ ೨೭ ಎರಡನೇ ದರ್ಜೆ ಕಾಲೇಜುಗಳಲ್ಲಿ, ಮಹಾರಾಜ ಕಾಲೇಜು ೧೮೮೫ರಲ್ಲಿ ಪ್ರಥಮ ಸ್ಥಾನವನ್ನು ಮತ್ತು ೧೮೮೬, ೧೮೮೭ರಲ್ಲಿ ಮೂರನೇ ಸ್ಥಾನವನ್ನು ಪಡೆದು ದಕ್ಷಿಣಭಾರತದಲ್ಲಿ ಉತ್ತಮ ಕಾಲೇಜು ಎಂಬ ಹೆಸರು ಗಳಿಸಿತು.

ಶ್ರೀ ಬಾಬಾ ಅವರ ವಿಶೇಷ ಸೇವೆಯನ್ನು ಗಮನಿಸಿ, ಅವರನ್ನು ಸರ್ಕಾರದ ಶಿಕ್ಷಣ ವಿಭಾಗದ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಅವರ ಸ್ಥಾನದಲ್ಲಿ ಶ್ರೇಷ್ಠ ಗಣಿತಜ್ಞರಾದ 'ಶ್ರೀ ಜಾನ್ ವೇರ್' ಪ್ರಾಂಶುಪಾಲರಾಗಿ ೧೯೧೦ರವರೆಗೆ ಕಾರ್ಯ ನಿರ್ವಹಿಸಿದರು. ೨೯ ನವೆಂಬರ್ ೧೮೯೧ರಲ್ಲಿ ವೇಲ್ಸ್‌ನ ರಾಜಕುಮಾರರಾದ ಗೌರವಾನ್ವಿತ ಆಲ್ಬರ್ಟ್ ವಿಕ್ಟರ್‌ರವರು ಈಗ ಇರುವ ಕಾಲೇಜಿನ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿದರು. ೧೮೯೩ರಲ್ಲಿ ಪೂರ್ಣಗೊಂಡ ಈ ಭವ್ಯ ಜ್ಞಾನಮಂದಿರ ಭಾರತೀಯ ಮತ್ತು ಅರಬ್ (ಸಾರ್ಸನಿಕೆ) ವಾಸ್ತು ಶೈಲಿಯದಾಗಿದೆ. ೧೮೯೪ರಲ್ಲಿ ಮಹಾರಾಜ ಕಾಲೇಜು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿತಗೊಂಡು ಇದೇ ಭವ್ಯ ಕಟ್ಟಡದಲ್ಲಿ ಒಂದು ಐತಿಹಾಸಿಕ ಘಟ್ಟವನ್ನು ತಲುಪಿತು. ಬಿ.ಎ., ತರಗತಿಗಳಲ್ಲಿ ಇತಿಹಾಸ ಮತ್ತು ಗಣಿತವನ್ನು ಐಚ್ಛಿಕ ವಿಷಯಗಳಾಗಿ ಬೋಧನೆ ಆರಂಭಿಸಲಾಯಿತು. ೧೯೧೦ರಲ್ಲಿ ಇದೇ ಕಾಲೇಜಿನ ಅಂಗವಾಗಿದ್ದ ಪ್ರೌಢಶಾಲೆಯನ್ನು ಅದರಿಂದ ಬೇರ್ಪಡಿಸಿ, ಮಹಾರಾಜ ಹೈಸ್ಕೂಲ್‌ಗೆ ವರ್ಗಾಯಿಸಲಾಯಿತು. ಮಹಾರಾಜರು ಈ ಕಾಲೇಜಿನ ಅಭಿವೃದ್ಧಿಯ ಬಗ್ಗೆ ತೀವ್ರ ಆಸಕ್ತಿಯನ್ನು ತೋರಿಸುತ್ತಿದ್ದರು. ಘನವಿದ್ವಾಂಸರುಗಳು ಪ್ರಾಂಶುಪಾಲರಾಗಿ ಮತ್ತು ಅಧ್ಯಾಪಕರಾಗಿ ಉತ್ಕೃಷ್ಟ ಜ್ಞಾನ ಪರಂಪರೆಯನ್ನು ಮುಂದುವರೆಸಿದರು. ೧೯೧೦ರಲ್ಲಿ ಶ್ರೀ ಥಾಮಸ್ ಡೆನ್ಹಮರನ್ನು ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು.

ಆಗಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡಬೇಕೆಂಬ ಆಶಯಕ್ಕೆ ಚಾಲನೆ ನೀಡಿದರು. ಶ್ರೀ ಥಾಮಸ್ ಡೆನ್ಹಮ್ ಮತ್ತು ಶ್ರೀ ಆರ್. ರೆಡ್ಡಿಯವರನ್ನು ವಿಶ್ವವಿದ್ಯಾನಿಲಯಗಳ ಕಾರ್ಯವೈಖರಿಯನ್ನು ಅಧ್ಯಯನ ಮಾಡಲು ಅಮೇರಿಕಾ ಮತ್ತು ಆಸ್ಟ್ರೇಲಿಯಾಕ್ಕೆ ಕಳುಹಿಸಲಾಯಿತು. ಅವರ ಅಧ್ಯಯನದ ವರದಿಯನ್ನು ಆಧರಿಸಿ ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅನುವು ಮಾಡುವ ಮಸೂದೆಯೊಂದನ್ನು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡಲಾಯಿತು. ಇದು ಭಾರತದಲ್ಲಿನ, ಬ್ರಿಟಿಷ್ ಆಡಳಿತಕ್ಕೊಳಪಡದ ಮೊದಲ ವಿಶ್ವವಿದ್ಯಾನಿಲಯವಾಯಿತು.

ಮಹಾರಾಜ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯಾದ ಅನಂತರ ಶ್ರೀ ಸಿ. ಆರ್. ರೆಡ್ಡಿಯವರು ಪ್ರಾಂಶುಪಾಲರಾದರು. ಇಂಗ್ಲೆಂಡಿನ ಕೇಂಬ್ರಿಡ್ ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಅಧ್ಯಯನ ಮಾಡಿದ ಡಾ॥ ಎನ್. ಎಸ್. ಸುಬ್ಬರಾವ್‌ರವರು ಶ್ರೀ ಸಿ. ಆರ್. ರೆಡ್ಡಿಯವರ ಬಳಿಕ ಪ್ರಾಂಶುಪಾಲರಾದರು. ೧೯೨೮ರಲ್ಲಿ ಡಾ॥ ಎನ್. ಎಸ್. ಸುಬ್ಬರಾವ್‌ರವರ ಅನಂತರ ಪ್ರೊ॥ ರೋಲೋ ಪ್ರಾಂಶುಪಾಲರಾದರು ಮತ್ತು ೧೯೪೩ರವರೆಗೆ ಸುಮಾರು ೧೫ ವರ್ಷಗಳ ಕಾಲ ಪ್ರಾಂಶುಪಾಲರಾಗಿ ಕಾಲೇಜಿನ ಧವಳಕೀರ್ತಿಗೆ ಕಾರಣರಾದರು.

ಅತ್ಯಂತ ಪ್ರಖ್ಯಾತರಾದ ಈ ಕೆಲವು ವಿದ್ವಾಂಸರುಗಳು ಈ ಕಾಲೇಜಿನಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ್ದಾರೆ – ಪ್ರೊ॥ ಕೆ. ಟಿ. ಷಾ., ಪ್ರೊ॥ ವಿ. ಆರ್. ವಾಡಿಯಾ, ಡಾ॥ ಎಸ್. ರಾಧಾಕೃಷ್ಣನ್ (ಭಾರತದ ರಾಷ್ಟ್ರಪತಿಗಳಾಗಿದ್ದವರು) ಡಾ॥ ಎಂ. ಹಿರಿಯಣ್ಣ (ಸಂಸ್ಕೃತ), ಪ್ರೊ॥ ಆರ್. ಮುಖರ್ಜಿ ಮತ್ತು ಪ್ರೊ॥ ಎಸ್. ವಿ. ವೆಂಕಟೇಶ್ವರ (ಇತಿಹಾಸ ವಿಭಾಗ), ಪ್ರೊ॥ ಜೆ. ಸಿ. ರೋಲೋ, ಪ್ರೊ॥ ಮೆಕಿಂಸ್ಟೋಷ್, ಪ್ರೊ॥ ಬಿ.ಎಂ. ಶ್ರೀಕಂಠಯ್ಯ (ಇಂಗ್ಲಿಷ್ ವಿಭಾಗ), ಪ್ರೊ॥ ಎನ್. ಎಸ್. ಸುಬ್ಬರಾವ್ (೧೯೩೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದವರು). ಕಾಲಕ್ರಮೇಣ ಬಿ.ಎ. ಕೋರ್ಸ್‌ನಲ್ಲಿ ಅನೇಕ ಐಚ್ಛಿಕ ವಿಷಯಗಳನ್ನು ಪ್ರಾರಂಭಿಸಲಾಯಿತು; ಕ್ರಮೇಣ ಎಂ.ಎ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ೧೯೬೦ರಲ್ಲಿ ಮಾನಸಗಂಗೋತ್ರಿಗೆ ಸ್ಥಳಾಂತರಿಸಲ್ಪಡುವವರೆಗೆ ಈ ಕಾಲೇಜಿನಲ್ಲಿಯೇ ಸ್ನಾತಕೋತ್ತರ ಕೋರ್ಸ್‌ಗಳು ಮುಂದುವರಿದವು. ಆ ಕಾಲದಲ್ಲಿ ಕಾಲೇಜಿನ ಕೀರ್ತಿ ಉತ್ತುಂಗಕ್ಕೆ ಏರಿತ್ತು ಎನ್ನುವುದು ಹೆಮ್ಮೆಯ ವಿಷಯ.

ಈ ಕಾಲೇಜಿನ ಅಧ್ಯಾಪಕರು ಮತ್ತು ವಿಧ್ಯಾರ್ಥಿಗಳು ದೇಶದ ಸ್ವಾತಂತ್ರ್ಯ ಹೋರಾಟದ ಚಳುವಳಿಯಿಂದ ದೂರ ಉಳಿಯಲಿಲ್ಲ; ಅವರಲ್ಲಿ ಕೆಲವರು ನೇರವಾಗಿ ಸಕ್ರಿಯವಾಗಿ ಭಾಗವಹಿಸಿದರು; ಇನ್ನು ಕೆಲವರು ಬರವಣಿಗೆಯ ಮೂಲಕ ಚಳುವಳಿಯಲ್ಲಿ ಭಾಗವಹಿಸಿದರು.

## ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು (೨೦೧೮–೧೯)

**೧. ಪದವಿ ಕೋರ್ಸ್‌ಗಳು ಮತ್ತು ಅವುಗಳ ಅವಧಿ**

(ಅ) ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ.) (6 ಸೆಮಿಸ್ಟರ್‌ಗಳು/3 ವರ್ಷ)

(ಆ) ಬ್ಯಾಚುಲರ್ ಆಫ್ ಕಾಮರ್ಸ್ (ಬಿ.ಕಾಂ.) (6 ಸೆಮಿಸ್ಟರ್‌ಗಳು/3 ವರ್ಷ)

(ಇ) ಬ್ಯಾಚುಲರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ (ಬಿ.ಬಿ.ಎ.) (6 ಸೆಮಿಸ್ಟರ್‌ಗಳು/3 ವರ್ಷ)

**೨. ಸ್ನಾತಕೋತ್ತರ ಕೋರ್ಸಗಳ ವಿವರ :**

(ಅ) ಎಂ.ಫಿಲ್ – ಸುಧಾರಣ ಆಡಳಿತ

(ಆ) ಎಂ.ಎಸ್‌ಸಿ., – ಅಪರಾಧ ಶಾಸ್ತ್ರ & ನ್ಯಾಯವಿಜ್ಞಾನ

(ಈ) ಎಂ.ಎ., – ಅಂತರ ರಾಷ್ಟ್ರೀಯ ಸಂಬಂಧಗಳು

೩. ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಹತೆ

ಬಿ.ಎ., ಬಿ.ಕಾಂ., ಬಿ.ಬಿ.ಎ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಪದವಿಪೂರ್ವ ಶಿಕ್ಷಣ ಮಂಡಳಿ ನಡೆಸಿರುವ ಎರಡು ವರ್ಷ ಪ್ರೀ–ಯೂನಿವರ್ಸಿಟಿ ಪರೀಕ್ಷೆಯಲ್ಲಿ ಅಥವಾ ವಿಶ್ವವಿದ್ಯಾನಿಲಯ ತತ್ಸಮಾನವೆಂದು ಪರಿಗಣಿಸುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

(ಅ) ಯಾವುದೇ ಜೆಓಸಿ (೧೦ + ೨)ಯಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ಬಿ.ಎ. ಮೊದಲನೇ ಸೆಮಿಸ್ಟರ್‌ಗೆ ಸೇರಲು ಅರ್ಹರಾಗಿರುತ್ತಾರೆ.

(ಆ) ಈ ಕೆಳಗೆ ಸೂಚಿಸಿರುವಂಥ ಜೆಓಸಿ (೧೦+೨)ಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳು ಮೊದಲನೇ ಸೆಮಿಸ್ಟರ್ ಬಿ.ಕಾಂ/ಬಿ.ಬಿ.ಎ. ಪದವಿ ತರಗತಿಗಳಿಗೆ ಸೇರಲು ಅರ್ಹರಾಗಿರುತ್ತಾರೆ.

| ಕ್ರ.ಸಂ. | ಜೆಓಸಿ ಕೋರ್ಸ್‌ನ ಹೆಸರು | ಅರ್ಹತೆ ಇರುವ ಕೋರ್ಸ್ |
|---|---|---|
| ೧. | ಅಕೌಂಟಿಂಗ್ ಮತ್ತು ಆಡಿಟಿಂಗ್ | ಬಿ.ಕಾಂ./ಬಿ.ಬಿ.ಎ. |
| ೨. | ಅಕೌಂಟಿಂಗ್ ಮತ್ತು ಕಾಸ್ಟಿಂಗ್ | ಬಿ.ಕಾಂ./ಬಿ.ಬಿ.ಎ. |
| ೩. | ಅಕೌಂಟಿಂಗ್ ಮತ್ತು ಟ್ಯಾಕ್ಸೇಷನ್ | ಬಿ.ಕಾಂ./ಬಿ.ಬಿ.ಎ. |
| ೪. | ಬ್ಯಾಂಕಿಂಗ್ | ಬಿ.ಕಾಂ./ಬಿ.ಬಿ.ಎ. |
| ೫. | ಆಫೀಸ್ ಮ್ಯಾನೇಜ್‌ಮೆಂಟ್ | ಬಿ.ಕಾಂ./ಬಿ.ಬಿ.ಎ. |
| ೬. | ಸ್ಟೆನೋಗ್ರಫಿ | ಬಿ.ಕಾಂ. |
| ೭. | ಕೋ–ಆಪರೇಷನ್ | ಬಿ.ಕಾಂ./ಬಿ.ಬಿ.ಎ. |
| ೮. | ಮಾರ್ಕೆಟಿಂಗ್ ಮತ್ತು ಸೇಲ್ಸ್‌ಮನ್‌ಶಿಪ್ | ಬಿ.ಬಿ.ಎ. |
| ೯. | ಮೆಟೀರಿಯಲ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ | ಬಿ.ಬಿ.ಎ. |
| ೧೦. | ಕಂಪ್ಯೂಟರ್ ಟೆಕ್ನಾಲಜಿ | ಬಿ.ಕಾಂ./ಬಿ.ಬಿ.ಎ. |

(ಇ) (i). ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ ನಡೆಸಿರುವ ಕಮರ್ಷಿಯಲ್ ಅಥವಾ ಸೆಕ್ರೆಟೇರಿಯಲ್ ಪ್ರಾಕ್ಟೀಸ್‌ನಲ್ಲಿ 3 ವರ್ಷಗಳ ಡಿಪ್ಲೊಮಾ ತರಗತಿಯನ್ನು ಪಾಸು ಮಾಡಿರುವ ಅಭ್ಯರ್ಥಿಯು ನೇರವಾಗಿ ಬಿ.ಕಾಂ. /ಬಿ.ಬಿ.ಎ.ನ 3 ನೇ ಸೆಮಿಸ್ಟರ್‌ಗೆ ಸೇರಿಕೊಳ್ಳಲು ಅರ್ಹನಾಗಿರುತ್ತಾನೆ. ಆದರೂ, ಅಂಥ ವಿದ್ಯಾರ್ಥಿಯು ಮೊದಲ ಎರಡು ಸೆಮಿಸ್ಟರ್‌ಗಳಲ್ಲಿನ ಭಾಷಾ ಪತ್ರಿಕೆಗಳಲ್ಲಿ ಹಾಗೂ ಕಡ್ಡಾಯ ಪತ್ರಿಕೆಗಳಾದ 'ಭಾರತದ ಸಂವಿಧಾನ' ಮತ್ತು 'ಪರಿಸರ ಅಧ್ಯಯನ' ಪತ್ರಿಕೆಗಳಲ್ಲಿ ತೇರ್ಗಡೆ ಹೊಂದಬೇಕಾಗುವುದು. ಅಂತಹ ವಿದ್ಯಾರ್ಥಿಗಳಿಗೆ ಈ ಪತ್ರಿಕೆಗಳ ಸಂಬಂಧ ಯಾವುದೇ 'ಆಂತರಿಕ ನಿರ್ಧಾರಣೆ (ಐಎ) ಇರುವುದಿಲ್ಲ. ಅಂತಿಮವಾದ ಲೆಕ್ಕಾಚಾರದಲ್ಲಿ ೮೦ ಅಂಕಗಳನ್ನು ೧೦೦ ಅಂಕಗಳಿಗೆ ಸಮೀಕರಿಸಲಾಗುವುದು.

(ii). ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ ನಡೆಸಿರುವ 3 ವರ್ಷಗಳ ಅವಧಿಯ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನ ಡಿಪ್ಲೊಮಾ ಪರೀಕ್ಷೆಯನ್ನು ಪಾಸು ಮಾಡಿರುವ ಅಭ್ಯರ್ಥಿಯು ಬಿ.ಕಾಂ./ ಬಿ.ಬಿ.ಎ. ಪದವಿಗಳ 5ನೇ ಸೆಮಿಸ್ಟರ್‌ಗೆ ನೇರವಾಗಿ ಪ್ರವೇಶ ಪಡೆಯಲು ಅರ್ಹನಾಗಿರುತ್ತಾನೆ. ಆದಾಗ್ಯೂ ಅಂಥ ವಿದ್ಯಾರ್ಥಿಯು ಮೊದಲ ನಾಲ್ಕು ಸೆಮಿಸ್ಟರ್‌ಗಳ ಭಾಷಾ ಮತ್ತು ಕಡ್ಡಾಯ

ಪತ್ರಿಕೆಗಳಲ್ಲಿ ತೇರ್ಗಡೆ ಹೊಂದಬೇಕಾಗಿರುವುದು ಅಗತ್ಯವಾಗಿದೆ. ಅಂಥ ಅಭ್ಯರ್ಥಿಗಳಿಗೆ ಈ ಪತ್ರಿಕೆಗಳ ಸಂಬಂಧ ಯಾವುದೇ 'ಆಂತರಿಕ ನಿರ್ಧಾರಣೆ' (ಆ.ಮೌ.) (IA) ಇರುವುದಿಲ್ಲ. ಅಂತಿಮವಾದ ಲೆಕ್ಕಾಚಾರದಲ್ಲಿ 80 ಅಂಕಗಳನ್ನು 100 ಅಂಕಗಳಿಗೆ ಸಮೀಕರಿಸಲಾಗುವುದು.

## ಬೋಧನಾ ಕ್ರಮ

**(ಅ) ಬಿ.ಎ. ಕೋರ್ಸ್‌ನಲ್ಲಿ**

1. ಮೊದಲನೇ/ಎರಡನೇ ಸೆಮಿಸ್ಟರ್‌ನಲ್ಲಿ 6 ಪತ್ರಿಕೆಗಳಿರುತ್ತವೆ. ಅವು – ಎರಡು ಭಾಷಾ ಪತ್ರಿಕೆಗಳು, 3 ಐಚ್ಛಿಕ ವಿಷಯಗಳು ಹಾಗೂ ಭಾರತ ಸಂವಿಧಾನ/ಪರಿಸರ ಅಧ್ಯಯನ.
2. ಮೂರನೇ ಸೆಮಿಸ್ಟರ್‌ನಲ್ಲಿ 5 ಪತ್ರಿಕೆಗಳಿರುತ್ತವೆ. ಅವು – ಎರಡು ಭಾಷಾ ಪತ್ರಿಕೆಗಳು, ಮತ್ತು 3 ಐಚ್ಛಿಕ ವಿಷಯಗಳು.
3. ನಾಲ್ಕನೇ ಸೆಮಿಸ್ಟರ್‌ನಲ್ಲಿ 6 ಪತ್ರಿಕೆಗಳು. ಅವು – ಎರಡು ಭಾಷಾ ಪತ್ರಿಕೆಗಳು, 3 ಐಚ್ಛಿಕ ವಿಷಯಗಳು ಮತ್ತು ಕಂಪ್ಯೂಟರ್ ಅಪ್ಲಿಕೇಷನ್.
4. 5 ಮತ್ತು 6ನೇ ಸೆಮಿಸ್ಟರ್‌ಗಳಲ್ಲಿ 3 ಐಚ್ಛಿಕ ವಿಷಯಗಳಿದ್ದು ಪ್ರತಿ ವಿಷಯಕ್ಕೂ ಮೂರು ಪತ್ರಿಕೆಗಳಿರುತ್ತವೆ.

**(ಆ) ಬಿ.ಬಿ.ಎ ಕೋರ್ಸ್‌ಗಳಲ್ಲಿ**

ಬಿ.ಬಿ.ಎ ಕೋರ್ಸ್‌ಗಳಲ್ಲಿ 6 ಸೆಮಿಸ್ಟರ್‌ಗಳಲ್ಲಿ 6 ಪತ್ರಿಕೆಗಳಿರುತ್ತವೆ. ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರತಿ ಸೆಮಿಸ್ಟರ್‌ನಲ್ಲಿ 2 ಭಾಷಾ ಪತ್ರಿಕೆಗಳು ಹಾಗೂ 3 ಕೋರ್/ಅಲೈಡ್ ಪತ್ರಿಕೆಗಳಿರುತ್ತವೆ. ಇದರ ಜೊತೆಗೆ ಕಡ್ಡಾಯ ಪತ್ರಿಕೆ ಇರುತ್ತದೆ. (ಮೊದಲನೇ ಸೆಮಿಸ್ಟರ್‌ನಲ್ಲಿ 'ಪರಿಸರ ಅಧ್ಯಯನ', ಎರಡನೇ ಸೆಮಿಸ್ಟರ್‌ನಲ್ಲಿ 'ಭಾರತದ ಸಂವಿಧಾನ', ಮೂರನೇ ಸೆಮಿಸ್ಟರ್‌ನಲ್ಲಿ 'ಕಂಪ್ಯೂಟರ್ ಅಪ್ಲಿಕೇಷನ್') ನಾಲ್ಕನೇ ಸೆಮಿಸ್ಟರ್‌ನಲ್ಲಿ ಕೇವಲ ಭಾಷಾ ಪತ್ರಿಕೆಗಳು ಮತ್ತು ಕೋರ್ ಪತ್ರಿಕೆಗಳಿರುತ್ತವೆ. ಐದನೇ ಮತ್ತು ಆರನೇ ಸೆಮಿಸ್ಟರ್‌ಗಳಲ್ಲಿ – ಆರು ಕೋರ್ ಪತ್ರಿಕೆಗಳಿರುತ್ತವೆ.

**(ಇ) ಬಿ.ಕಾಂ., ಕೋರ್ಸ್‌ನಲ್ಲಿ**

1. ಮೊದಲನೇ/ಎರಡನೇ ಸೆಮಿಸ್ಟರ್‌ನಲ್ಲಿ 6 ಪತ್ರಿಕೆಗಳಿರುತ್ತವೆ. ಅವು – ಎರಡು ಭಾಷಾ ಪತ್ರಿಕೆಗಳು, ಮೂರು ಐಚ್ಛಿಕ ವಿಷಯಗಳು ಹಾಗೂ
2. ಮೂರನೇ/ನಾಲ್ಕನೇ ಸೆಮಿಸ್ಟರ್‌ನಲ್ಲಿ 6 ಪತ್ರಿಕೆಗಳಿರುತ್ತವೆ. ಅವು – ಎರಡು ಭಾಷಾ ಪತ್ರಿಕೆಗಳು, ಮತ್ತು 3 ಐಚ್ಛಿಕ ವಿಷಯಗಳು ಮತ್ತು ಕಂಪ್ಯೂಟರ್ ಫಂಡಮೆಂಟಲ್ಸ್/ಕಂಪ್ಯೂಟರ್ ಅಪ್ಲಿಕೇಷನ್.
3. ಐದನೇ ಮತ್ತು ಆರನೇ ಸೆಮಿಸ್ಟರ್‌ನಲ್ಲಿ ನಾಲ್ಕು ಕಂಪಲ್‌ಸರಿ ವಿಷಯಗಳು ಮತ್ತು ಎರಡು ಎಲೆಕ್ಟಿವ್ ವಿಷಯಗಳಿರುತ್ತವೆ.

**ಬೋಧನಾ ಮಾಧ್ಯಮ**

ಬಿ.ಎ., ತರಗತಿಗಳ ಬೋಧನಾ ಮಾಧ್ಯಮವು ಇಂಗ್ಲಿಷ್ ಅಥವಾ ಕನ್ನಡವಾಗಿರುತ್ತದೆ. ಪ್ರಾಚೀನ

ಇತಿಹಾಸ, ಪುರಾತತ್ತ್ವ ಶಾಸ್ತ್ರ & ವಸ್ತು ಸಂಗ್ರಹಣಾ ಶಾಸ್ತ್ರ ಮತ್ತು ಐಚ್ಛಿಕ ಇಂಗ್ಲಿಷ್ ವಿಷಯಗಳ ಬೋಧನಾ ಮಾಧ್ಯಮವು ಕೇವಲ ಇಂಗ್ಲಿಷ್ ಆಗಿರುತ್ತದೆ. ಬಿ.ಬಿ.ಎ., ಮತ್ತು ಬಿ.ಕಾಂ., ತರಗತಿಗಳ ಬೋಧನಾ ಮಾಧ್ಯಮವು ಕೇವಲ ಇಂಗ್ಲಿಷ್ ಆಗಿರುತ್ತದೆ. ಆದರೆ ವಿದ್ಯಾರ್ಥಿಯು ಇಚ್ಛೆಪಟ್ಟಲ್ಲಿ ಒಟ್ಟು ಪತ್ರಿಕೆಯನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಉತ್ತರಿಸಬಹುದು. ಇದು ಭಾಷಾ ಪರೀಕ್ಷೆಗಳಿಗೆ ಅನ್ವಯವಾಗುವುದಿಲ್ಲ.

**ಅಧ್ಯಯನ ವಿಷಯಗಳು**

**ಗುಂಪು 1 – ಭಾಷೆಗಳು**

1. ಇಂಗ್ಲಿಷ್, ಕನ್ನಡ, ಹಿಂದಿ, ಸಂಸ್ಕೃತ, ಉರ್ದು, ತೆಲುಗು, ತಮಿಳು, ಮಲೆಯಾಳಂ, ಪರ್ಷಿಯನ್, ಅರೇಬಿಕ್, ಫ್ರೆಂಚ್, ಜರ್ಮನ್, ರಷ್ಯನ್ – ಈ ಭಾಷೆಗಳಲ್ಲಿ ಅಭ್ಯರ್ಥಿಯು ಯಾವುದೇ ಎರಡು ಭಾಷೆಗಳನ್ನು ಅಧ್ಯಯನ ಮಾಡಬಹುದು.

**ಸೂಚನೆ :**

1. ಆಯ್ಕೆ ಮಾಡಿಕೊಂಡ ಎರಡು ಭಾಷೆಗಳಲ್ಲಿ ಒಂದು ಭಾರತೀಯ ಭಾಷೆಯಾಗಿರಬೇಕು. ಆದಾಗ್ಯೂ ವಿದೇಶಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿರುವ ಒಂದು ಭಾರತೀಯ ಭಾಷಾ ಅಧ್ಯಯನ ನಿಯಮವನ್ನು ವಿಶ್ವವಿದ್ಯಾನಿಲಯ ಕೈಬಿಡಬಹುದು.
2. ಭಾರತೀಯ ಭಾಷೆ ಎಂದರೆ ಸಂವಿಧಾನ 8ನೇ ಪರಿಚ್ಛೇದದಲ್ಲಿ ಸೂಚಿತವಾಗಿರುವ ಯಾವುದಾದರೂ ಒಂದು ಭಾಷೆ.
3. ಕಾಲೇಜಿನಲ್ಲಿ ಬೋಧಿಸದ ವಿಷಯವನ್ನು ವಿದ್ಯಾರ್ಥಿಯು ಸ್ವಂತವಾಗಿ ಅಧ್ಯಯನ ಮಾಡಿ ಪರೀಕ್ಷೆಗೆ ಕುಳಿತುಕೊಳ್ಳಲು ವಿಶ್ವವಿದ್ಯಾನಿಲಯ ಅನುಮತಿ ನೀಡುತ್ತದೆ. ಈ ಸಂಬಂಧ ವಿದ್ಯಾರ್ಥಿಯ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗದು. 80 ಅಂಕಗಳನ್ನು 100 ಅಂಕಗಳಿಗೆ ಸಮೀಕರಿಸಲಾಗುವುದು.
4. ಕಿವುಡು ಮತ್ತು ಮೂಗರು, ಅಂಗವೈಕಲ್ಯದಿಂದ ಬಳಲುತ್ತಿರುವವರು, ಬುದ್ಧಿಮಾಂದ್ಯರು ಹಾಗೂ ಕಲಿಕಾ ದೋಷಕ್ಕೆ ಒಳಗಾದ ವಿದ್ಯಾರ್ಥಿಗಳು ಯಾವುದಾದರೂ ಒಂದು ಭಾಷೆಯನ್ನು ತೆಗೆದುಕೊಳ್ಳಬಹುದು.

**ಗುಂಪು II–ಐಚ್ಛಿಕ ವಿಷಯಗಳು**

ಬಿ.ಎ., ಅಭ್ಯರ್ಥಿಗಳು ಈ ಕೆಳಗಿನ ವಿಷಯಸಮೂಹಗಳ ಪಟ್ಟಿಯಿಂದ ಯಾವುದಾದರೂ ಒಂದು ವಿಷಯಸಮೂಹವನ್ನು ಆಯ್ಕೆ ಮಾಡಿಕೊಳ್ಳಬೇಕು.

## ಬಿ.ಎ., ಕೋರ್ಸ್‌ನಲ್ಲಿರುವ ವಿಷಯ ಸಮೂಹಗಳು (ಕಾಂಬಿನೇಷನ್ಸ್)

| | | | | |
|---|---|---|---|---|
| 1. | H.E.K. | ಇತಿಹಾಸ | ಅರ್ಥಶಾಸ್ತ್ರ | ಐಚ್ಛಿಕ ಕನ್ನಡ |
| 2. | H.E.G. | ಇತಿಹಾಸ | ಅರ್ಥಶಾಸ್ತ್ರ | ಭೂಗೋಳಶಾಸ್ತ್ರ |

| | | | | |
|---|---|---|---|---|
| 3. | H.E.P. | ಇತಿಹಾಸ | ಅರ್ಥಶಾಸ್ತ್ರ | ರಾಜ್ಯಶಾಸ್ತ್ರ |
| 4. | H.K.J. | ಇತಿಹಾಸ | ಐಚ್ಛಿಕ ಕನ್ನಡ | ಸಂವಹನ ಮತ್ತು ಪತ್ರಿಕೋದ್ಯಮ |
| 5. | H.E.Hindi | ಇತಿಹಾಸ | ಅರ್ಥಶಾಸ್ತ್ರ | ಐಚ್ಛಿಕ ಹಿಂದಿ |
| 6. | H.E. Sanskrit | ಇತಿಹಾಸ | ಅರ್ಥಶಾಸ್ತ್ರ | ಐಚ್ಛಿಕ ಸಂಸ್ಕೃತ |
| 7. | H.E.E. | ಇತಿಹಾಸ | ಅರ್ಥಶಾಸ್ತ್ರ | ಐಚ್ಛಿಕ ಇಂಗ್ಲೀಷ್ |
| 8. | A.S.G. | ಪುರಾತತ್ತ್ವ ಇತಿಹಾಸ | ಸಮಾಜಶಾಸ್ತ್ರ | ಭೂಗೋಳಶಾಸ್ತ್ರ |
| 9. | S.K.F. | ಸಮಾಜಶಾಸ್ತ್ರ | ಕನ್ನಡ | ಜಾನಪದ |
| 10. | A.P.G. | ಮಾನವಶಾಸ್ತ್ರ | ರಾಜ್ಯಶಾಸ್ತ್ರ | ಭೂಗೋಳಶಾಸ್ತ್ರ |
| 11. | C.P.S. | ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ | ಮನಃಶಾಸ್ತ್ರ | ಸಮಾಜಶಾಸ್ತ್ರ |
| 12. | K.S.Phi | ಕನ್ನಡ | ಸಮಾಜಶಾಸ್ತ್ರ | ತತ್ವಶಾಸ್ತ್ರ |
| 13. | P.J.E | ಸಾರ್ವಜನಿಕ ಆಡಳಿತ | ಸಂವಹನ ಮತ್ತು ಪತ್ರಿಕೋದ್ಯಮ | ಐಚ್ಛಿಕ ಇಂಗ್ಲೀಷ್ |
| 14. | H.E.Co | ಇತಿಹಾಸ | ಅರ್ಥಶಾಸ್ತ್ರ | ಸಹಕಾರ |
| 15. | E.P.Co. | ಅರ್ಥಶಾಸ್ತ್ರ | ರಾಜ್ಯಶಾಸ್ತ್ರ | ಸಹಕಾರ |
| 16. | J.E.Psy. | ಸಂವಹನ ಮತ್ತು ಪತ್ರಿಕೋದ್ಯಮ | ಇಂಗ್ಲೀಷ್ | ಮನಃಶಾಸ್ತ್ರ |
| 17. | H.E.A.&M | ಇತಿಹಾಸ | ಆರ್ಥಶಾಸ್ತ್ರ | ಪುರಾತತ್ವ ವಸ್ತುಸಂಗ್ರಹಣಾಶಾಸ್ತ್ರ ವಸ್ತುಸಂಗ್ರಹಾಲಯ ಶಾಸ್ತ್ರ (ವೃತ್ತಿಪರ) |
| 18. | H.K.L. | ಇತಿಹಾಸ | ಕನ್ನಡ | ಭಾಷಾವಿಜ್ಞಾನ |
| 19. | K.S.FRM | ಕನ್ನಡ | ಸಮಾಜಶಾಸ್ತ್ರ | ಕುಟುಂಬ ಸಂಪನ್ಮೂಲ ನಿರ್ವಹಣೆ |
| 20. | C.P.J. | ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ | ಸಾರ್ವಜನಿಕ ಆಡಳಿತ | ಸಂವಹನ ಮತ್ತು ಪತ್ರಿಕೋದ್ಯಮ |
| 21. | JEF | ಸಂವಹನ ಮತ್ತು ಪತ್ರಿಕೋದ್ಯಮ | ಆರ್ಥಶಾಸ್ತ್ರ | ಫಂಕ್ಷನಲ್ ಇಂಗ್ಲೀಷ್ (ವೃತ್ತಿಪರ) |

2. **ಬಿ.ಬಿ.ಎ., ಕೋರ್ಸ್‌ನಲ್ಲಿ ಇರುವ ಎಲೆಕ್ಟಿವ್‌ಗಳು –**

1. ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ 2. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್

3. ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್

3. **ಬಿ.ಕಾಂ., ಕೋರ್ಸ್‌ನಲ್ಲಿ ಇರುವ ಎಲೆಕ್ಟಿವ್**

1. ಫೈನಾನ್ಸ್ & ಅಕೌಂಟ್ಸ್

**ಕಡ್ಡಾಯ ವಿಷಯಗಳು**

ಎಲ್ಲ ಕೋರ್ಸ್‌ಗಳ ವಿದ್ಯಾರ್ಥಿಗಳಿಗೂ ಈ ಕೆಳಕಂಡ ವಿಷಯಗಳ ಅಧ್ಯಯನ ಕಡ್ಡಾಯ.

**ಬಿ.ಎ.,/ಬಿ.ಬಿ.ಎ., ವಿದ್ಯಾರ್ಥಿಗಳಿಗೆ –**

ಪ್ರಥಮ/ದ್ವಿತೀಯ ಸೆಮಿಸ್ಟರ್‌ನಲ್ಲಿ – ಭಾರತ ಸಂವಿಧಾನ/ಪರಿಸರ ಅಧ್ಯಯನ
ಚತುರ್ಥಸೆಮಿಸ್ಟರ್ ನಲ್ಲಿ ಕಂಪ್ಯೂಟರ್ ಅಪ್ಲಿಕೇಷನ್ಸ್

**ಬಿ.ಕಾಂ ವಿದ್ಯಾರ್ಥಿಗಳಿಗೆ –**

ಪ್ರಥಮ/ದ್ವಿತೀಯ ಸೆಮಿಸ್ಟರ್‌ನಲ್ಲಿ – ಭಾರತ ಸಂವಿಧಾನ/ಪರಿಸರ ಅಧ್ಯಯನ
ತೃತೀಯ/ಚತುರ್ಥ ಸೆಮಿಸ್ಟರ್‌ನಲ್ಲಿ – ಕಂಪ್ಯೂಟರ್ ಫಂಡಮೆಂಟಲ್ಸ್/ಕಂಪ್ಯೂಟರ್ ಅಪ್ಲಿಕೇಷನ್ಸ್

**ಬಿ.ಎ. ಅಭ್ಯರ್ಥಿಗಳ ಗಮನಕ್ಕೆ**

1. ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಐಚ್ಛಿಕ ವಿಷಯಗಳಲ್ಲಿ ಯಾವುದಾದರೂ **ಎರಡು** ವಿಷಯ ಸಮೂಹವನ್ನು ಆದ್ಯತೆ ಮೇರೆಗೆ ತಮ್ಮ ಪ್ರವೇಶಾತಿ ಅರ್ಜಿಯಲ್ಲಿ ಸೂಚಿಸುವುದಕ್ಕೆ ಅನುಮತಿಯನ್ನು ನೀಡಲಾಗುತ್ತದೆ. ತಮ್ಮ ಪ್ರವೇಶಾತಿ ಅರ್ಜಿಯಲ್ಲಿ ಸೂಚಿಸಿರುವ ಯಾವುದೇ ಐಚ್ಛಿಕ ವಿಷಯಗಳಿಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆಯ್ಕೆ ಆಗದಿದ್ದಲ್ಲಿ ಲಭ್ಯವಿರುವ ಐಚ್ಛಿಕ ವಿಷಯಗಳಿಗೆ/ಮಾಧ್ಯಮಗಳಿಗೆ ಪ್ರವೇಶಾತಿಯನ್ನು ಸಮಿತಿ ಶಿಫಾರಸ್ಸಿನೊಂದಿಗೆ ಪರಿಗಣಿಸಲಾಗುವುದು.
2. ಯಾವುದೇ ಕಾಂಬಿನೇಷನ್‌ಗೆ **05ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ** ಆಂತಹ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲಾಗುವುದಿಲ್ಲ.

## ಸಾಮಾನ್ಯ ನಿಯಮಾವಳಿ

### ಪೂರ್ಣಾವಧಿಯಲ್ಲಿ ಇತರೆಡೆ ಉದ್ಯೋಗಿಯಾಗಿರುವ ವ್ಯಕ್ತಿಗಳ ಪ್ರವೇಶ ಹಾಗೂ ಹಾಜರಾತಿಯ ಬಗೆಗಿನ ನಿಯಮಾವಳಿ:

1. ಪದವಿ, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳಿಗಾಗಿ ಈ ವಿಶ್ವವಿದ್ಯಾನಿಲಯದ ಯಾವುದೇ ಪೂರ್ಣಾವಧಿಯ ನಿಯಮಿತವಾದ ಕೋರ್ಸ್‌ಗಳಿಗೆ ಸೇರಲು ಬೇರೆ ಕಡೆ ಪೂರ್ಣಾವಧಿ ಅಥವಾ ಖಂಡಾವಧಿಯ ಉದ್ಯೋಗಿಯಾಗಿರುವ ವ್ಯಕ್ತಿ ಪ್ರವೇಶ ಪಡೆಯಲು, ಮುಂದುವರಿಸಿ ಪೂರ್ತಿಗೊಳಿಸಲು ಅರ್ಹನಾಗಿರುವುದಿಲ್ಲ. ಆದರೆ ಈ ಮುಂದೆ ಸೂಚಿಸಿರುವ ನಿಯಮವನ್ನು ಅನುಸರಿಸಿದರೆ ಸಾಧ್ಯವಾಗಬಹುದು.
   (ಅ) ಅಂಥ ಅಧ್ಯಯನವನ್ನು ಕೈಗೊಳ್ಳಲು ಮಾಲೀಕನಿಂದ ಅಥವಾ ಯುಕ್ತ ಅಧಿಕಾರಿಯಿಂದ ಲಿಖಿತ ಅನುಮತಿಯನ್ನು ಪಡೆದಿರುವುದು.
   (ಆ) ಅಂಥ ಉದ್ಯೋಗದ ಬಗೆಗೆ ಪೂರ್ಣ ವಿವರವನ್ನು ಲಿಖಿತರೂಪದಲ್ಲಿ ಸಂಸ್ಥೆಯ ಮುಖ್ಯಸ್ಥರಿಗೆ ಬರೆದು ತಿಳಿಸಿರುವುದು; ಹಾಗೂ
   (ಇ) ಕೋರ್ಸಿಗೆ ಅಗತ್ಯವಾದ ಅವಧಿಯವರೆಗೆ ಕ್ರಮಬದ್ಧವಾಗಿ ರಜೆ ಪಡೆದಿರುವ ಬಗೆಗೆ ನಂಬಲರ್ಹವಾ–ದಂಥ ಪುರಾವೆಯನ್ನು ಒದಗಿಸುವುದು.

2. ಆದಾಗ್ಯೂ ಔಪಚಾರಿಕವಾಗಿ ವಿಶ್ವವಿದ್ಯಾನಿಲಯದಿಂದ ಖಂಡಾವಧಿ ಕೋರ್ಸ್ ಆಗಿ ಅಂಗೀಕೃತವಾಗಿರುವಂಥ ಕೋರ್ಸುಗಳನ್ನು ಸಂಜೆ ಅಥವಾ ಬೆಳಗಿನ ತರಗತಿಗಳಲ್ಲಿ ಅಧ್ಯಯನ ಮಾಡಲು ಪೂರ್ಣಾವಧಿ ಅಥವಾ ಖಂಡಾವಧಿಯ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಅರ್ಹರಾಗಿರುತ್ತಾರೆ. ಇದಕ್ಕೂ ಸಹ ಮಾಲೀಕರ ಅನುಮತಿ ಬೇಕಾಗಿರುವುದಲ್ಲದೆ ತರಗತಿಗಳಿಗೆ ಹಾಜರಾಗಲು ಕೆಲಸ ಮಾಡುವ ಸ್ಥಳ ಸಂಸ್ಥೆಗೆ ಸಮೀಪದಲ್ಲಿರಬೇಕು.

3. ಯಾವುದೇ ವಿದ್ಯಾರ್ಥಿ ತನ್ನ ಉದ್ಯೋಗವನ್ನು ಕುರಿತ ಮಾಹಿತಿಯನ್ನು ಮುಚ್ಚಿಟ್ಟು ಅಥವಾ ಮೇಲೆ ಸೂಚಿಸಿರುವ ನಿಯಮಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಆ ವಿದ್ಯಾರ್ಥಿ ಕೋರ್ಸಿನಿಂದ ತೆಗೆಯಲ್ಪಡಲು ಅರ್ಹನಾಗಿರುತ್ತಾನೆ ಮತ್ತು ಆತ/ಆಕೆಯನ್ನು ಆ ಕೋರ್ಸಿನ ಯಾವುದೇ ರೀತಿಯ ಹಾಜರಾತಿಗಾಗಲಿ ಪರೀಕ್ಷಾ ಫಲಿತಾಂಶಕ್ಕಾಗಲಿ, ಬಹುಮಾನ ಇತ್ಯಾದಿಗಳಿಗಾಗಲಿ ಪರಿಗಣಿಸಲಾಗದು ಮತ್ತು ಆತ/ಆಕೆಯ ಮೇಲೆ ಇತರ ಶಿಸ್ತು ಕ್ರಮವನ್ನು, ದಂಡವನ್ನು ವಿಧಿಸಲು ತೀರ್ಮಾನ ತೆಗೆದುಕೊಳ್ಳಲಾಗುವುದು.

4. **ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ (ಅಧ್ಯಯನ ವಿಭಾಗಗಳಲ್ಲಿ) ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದು ಅಧ್ಯಯನ ಮಾಡುತ್ತಿರುವ ಯಾವುದೇ ವಿದ್ಯಾರ್ಥಿ ಏಕಕಾಲದಲ್ಲಿ ಪದವಿ ನೀಡುವಂಥ ಬೇರೊಂದು ಕೋರ್ಸನ್ನು (ನಿಯತವಾದ ಅಥವಾ ಸಂಜೆ ಕೋರ್ಸುಗಳಲ್ಲಿ) ಅಧ್ಯಯನ ಮಾಡಲು ಅನುಮತಿ ಇರುವುದಿಲ್ಲ.**

5. **ಒಂದಕ್ಕಿಂತ ಹೆಚ್ಚು ಕೋರ್ಸುಗಳಿಗೆ ವಿದ್ಯಾರ್ಥಿ ಸೇರಿಕೊಂಡಂಥ ಸಂದರ್ಭದಲ್ಲಿ ಆತನಿಗೆ/ಆಕೆಗೆ ಯಾವುದೇ ರೀತಿಯ ಮುನ್ಸೂಚನೆ ನೀಡದ ರೀತಿಯಲ್ಲಿ ವಿಶ್ವವಿದ್ಯಾನಿಲಯ ಅವನ/ಅವಳ ಎಲ್ಲಾ ಪ್ರವೇಶಾತಿಯನ್ನು ರದ್ದುಮಾಡುತ್ತದೆ.**

## ಹಾಜರಾತಿ

(೧) ಪ್ರತಿಯೊಂದು ಸೆಮಿಸ್ಟರ್‌ನಲ್ಲಿನ ಪ್ರತಿಯೊಂದು ವಿಷಯದಲ್ಲಿಯೂ ನಡೆದ ತರಗತಿಗಳಲ್ಲಿ ಕನಿಷ್ಠ ೭೫% ಹಾಜರಾತಿಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಹೊಂದಿರಲೇಬೇಕು.

(೨) ೭೫% ಕ್ಕಿಂತ ಕಡಿಮೆ ಹಾಜರಾತಿಯುಳ್ಳ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ ಮತ್ತು ಮುಂದಿನ ಸೆಮಿಸ್ಟರ್‌ಗೆ ಪ್ರವೇಶಾತಿಯನ್ನು ಪಡೆದುಕೊಳ್ಳುವಂತಿಲ್ಲ.

(೩) ೭೫%ಕ್ಕಿಂತ ಕಡಿಮೆ ಹಾಜರಾತಿಯುಳ್ಳ ವಿದ್ಯಾರ್ಥಿಯು ಮತ್ತೆ ಮರು ವರ್ಷ ಅದೇ ಸೆಮಿಸ್ಟರ್‌ನಲ್ಲಿ ಪ್ರವೇಶ ಪಡೆದು ೭೫% ಹಾಜರಾತಿಯನ್ನು ಪಡೆಯಬಹುದಾಗಿದೆ. ಇಡೀ ಕೋರ್ಸಿನಲ್ಲಿ ಈ ಸೌಲಭ್ಯ ಪಡೆಯುವ ಅವಕಾಶ ಕೇಬಲ ಎರಡು ಬಾರಿ ಮಾತ್ರ

(೪) ಸಂಸ್ಥೆಯ ಮುಖ್ಯಸ್ಥರ ಪೂರ್ವಾನುಮತಿಯನ್ನು ಪಡೆದು ಕ್ರೀಡೆ/ಎನ್‌ಸಿಸಿ / ಎನ್ ಎಸ್ ಎಸ್/ ಸಾಂಸ್ಕೃತಿಕ/ ಇನ್ನಾವುದೇ ಅಧಿಕೃತ ಚಟುವಟಿಕೆಯಲ್ಲಿ ಕಾಲೇಜು/ ವಿಶ್ವವಿದ್ಯಾನಿಲಯ / ರಾಜ್ಯ/ ರಾಷ್ಟ್ರವನ್ನು ಪ್ರತಿನಿಧಿಸಿದ ವಿದ್ಯಾರ್ಥಿಗೆ ೭೫%ಕ್ಕಿಂತ ಕಡಿಮೆ ಹಾಜರಾತಿ ಉಂಟಾದಲ್ಲಿ ಅಂತಹ ವಿದ್ಯಾರ್ಥಿ ಗರಿಷ್ಠ ೧೫ ದಿನಗಳ ಹಾಜರಾತಿಯನ್ನು ಪ್ರಾಂಶುಪಾಲರ ಶಿಫಾರಸಿನ ಮೇಲೆ ಪಡೆಯಲು ಅರ್ಹ.

**ಪರೀಕ್ಷೆ**

ಸಮ–ಸಮ, ಬೆಸ–ಬೆಸ ಕ್ರಮದಲ್ಲಿ ಆಯಾಯ ಸೆಮಿಸ್ಟರ್‌ನ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು.

(ವಿ.ವಿ. ಸುತ್ತೋಲೆ ಸಂಖ್ಯೆ: ಪ.ವಿ. 8.6/ಅದಿಸೂಚನೆ/2010–11 ದಿನಾಂಕ 22–08–14)

**ಡಿಗ್ರಿ ಕೋರ್ಸಗಳಲ್ಲಿ ಮುಂದಿನ ತರಗತಿಗೆ ಪ್ರವೇಶ ಪಡೆಯಲು ನಿಯಮವಾಳಿ**

(1) ಎಷ್ಟೇ ವಿಷಯಗಳಲ್ಲಿ ಅನುತ್ತೀರ್ಣನಾದರೂ ವಿದ್ಯಾರ್ಥಿ ಮುಂದಿನ ತರಗತಿಗೆ ಪ್ರವೇಶಾತಿ ಪಡೆಯಬಹುದು. ಆದಾಗ್ಯೂ ಕೋರ್ಸಿನ ಎರಡುಪಟ್ಟು ಅವಧಿಯೊಳಗಾಗಿ ವಿದ್ಯಾರ್ಥಿಯು ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಬೇಕು.

(2) ಪ್ರಾಯೋಗಿಕ ವಿಷಯಗಳ ವಿದ್ಯಾರ್ಥಿಯು 'ಥಿಯರಿ' ಮತ್ತು 'ಪ್ರಾಯೋಗಿಕ ಪರೀಕ್ಷೆ' – ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು. ಪ್ರತಿಯೊಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ('ಥಿಯರಿ' ಮತ್ತು 'ಪ್ರಾಯೋಗಿಕ ಪರೀಕ್ಷೆ' ಸೇರಿ) ಕನಿಷ್ಠ ಶೇ. 40 ಅಂಕಗಳನ್ನು ಪಡೆಯತಕ್ಕದ್ದು.

(3) ಕೋರ್ಸನ್ನು ಮುಂದುವರಿಸದೇ ಬಿಟ್ಟವರು/ಮುಂದಿನ ಪ್ರವೇಶಾತಿ ಮಾಡಿಕೊಳ್ಳದವರು ಅದೇ ಸೆಮಿಸ್ಟರ್‌ಗೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಾತ್ರ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಕೋರ್ಸಿನ ಇಡೀ ಅವಧಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಈ ಅವಕಾಶ ಕೇವಲ ಎರಡು ಬಾರಿ ಮಾತ್ರ ಲಭ್ಯ.

**ಪ್ರವೇಶಾತಿಗೆ ಅರ್ಜಿ ಸಲ್ಲಿಸುವುದರ ಬಗ್ಗೆ :**

ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕವನ್ನು ಕಟ್ಟಿ, ಕಾಲೇಜಿನ ಕಚೇರಿಯಿಂದ ಅರ್ಜಿ ಫಾರಂ ಪಡೆದು ಅದನ್ನು ಸರಿಯಾಗಿ ಭರ್ತಿಮಾಡಿ ಅದರೊಂದಿಗೆ ಈ ಕೆಳಕಂಡ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು. (ಒಂದು ಪ್ರತಿ ಮಾತ್ರ)

(೧) ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಕ್ರೋಢೀಕೃತ ಅಂಕಪಟ್ಟಿ

(೨) ಪದವಿಪೂರ್ವ ತರಗತಿಯ/ವಿಶ್ವವಿದ್ಯಾನಿಲಯದಿಂದ ತತ್ಸಮಾನವೆಂದು ಪರಿಗಣಿತವಾದ ತರಗತಿಯ ಅಂಕಪಟ್ಟಿ (ಪಿ.ಯು.ಸಿ.)

(೩) ಕ್ರೀಡೆಗಳು, ಎನ್.ಸಿ.ಸಿ., ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಮತ್ತಿತರ ಚಟುವಟಿಕೆಗಳಿಗೆ ಸಂಬಂಧಿಸಿರುವ ಪ್ರಮಾಣಪತ್ರಗಳು (ಇದ್ದರೆ).

(೪) ಇತ್ತೀಚಿನ ಸರ್ಕಾರಿ ಆಜ್ಞೆಯ ಪ್ರಕಾರ ೧–೪–೯೫ ಅಥವಾ ತದನಂತರದ ಜಾತಿ ಮತ್ತು ವರಮಾನ ಪ್ರಮಾಣ ಪತ್ರಗಳ ಪ್ರತಿಗಳು (ವಿ. ಸೂ.: ಸಾಮಾನ್ಯವರ್ಗಕ್ಕೆ ಸೇರಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಇದು ಅನ್ವಯಿಸುವುದಿಲ್ಲ)

(೫) ವರ್ಗಾವಣೆ ಪ್ರಮಾಣಪತ್ರ

(೬) ನಡತೆಯ ಪ್ರಮಾಣಪತ್ರ

(೭) ಆಧಾರ್ ಕಾರ್ಡ್

**ಆಯ್ಕೆಯ ಬಗ್ಗೆ ಅಭ್ಯರ್ಥಿಗಳಿಗೆ ಸೂಚಿಸುವುದರ ಬಗ್ಗೆ**

**ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳ ಹೆಸರುಗಳ ಪಟ್ಟಿಯನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ತಿಳಿವಳಿಕೆ ಪತ್ರವನ್ನು ಕಳುಹಿಸಲಾಗುವುದಿಲ್ಲ.**

**ಪ್ರವೇಶಾತಿ**

ಪ್ರವೇಶಾತಿ ಸಮಯದಲ್ಲಿ ಈ ಕೆಳಗಿನವುಗಳನ್ನು ಕಾಲೇಜಿಗೆ ಸಲ್ಲಿಸಬೇಕು.

(1) ಎಲ್ಲಾ ಪ್ರಮಾಣ ಪತ್ರಗಳ ಮೂಲಪ್ರತಿಗಳು. (ಇವನ್ನುಕಾಲೇಜಿನ ಪ್ರಾಂಶುಪಾಲರ ಮುಂದೆ ಹಾಜರುಪಡಿಸಬೇಕು. ಇಲ್ಲದಿದ್ದರೆ ಪ್ರವೇಶಾತಿ ರದ್ದಾಯಿತೆಂಬುದಾಗಿ ಎಣಿಸಲಾಗುತ್ತದೆ).

(2) ಪಾಸ್‌ಪೂರ್ಟ್ ಅಳತೆಯ 3 ಫೋಟೊಗಳು.

(3) ಸ್ವವಿಳಾಸ ಬರೆದಿರುವ ನಾಲ್ಕು ಖಾಲಿ ಇನ್‌ಲ್ಯಾಂಡ್ ಲೆಟರ್‌ಗಳು.

(4) ವಿದೇಶಿ ವಿದ್ಯಾರ್ಥಿಗಳು ತಮ್ಮ ಪಾಸ್‌ಪೋರ್ಟ್ ಮತ್ತು ವಿಸಾದ ಮೂರು ಪ್ರತಿಗಳನ್ನು ಸಲ್ಲಿಸಬೇಕು.

**ಸೂಚನೆ: ಪ್ರವೇಶಾತಿ ಪಡೆದ ಅನಂತರ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ನಲ್ಲಿ ತಮ್ಮ ಹೆಸರಿನಲ್ಲಿಯೇ ಖಾತೆ ತೆರೆಯುವುದು ಕಡ್ಡಾಯ.**

**ವಿಶೇಷ ಸೂಚನೆ :**

1. ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳಿಗೆ ತಹಸೀಲ್ದಾರರ ಪರವಾಗಿ ಸಹಿ ಮಾಡುವಹಾಗಿಲ್ಲ. ಹಾಗೇನಾದರೂ ಸಹಿ ಮಾಡುವ ಸಂದರ್ಭದಲ್ಲಿ ತಹಸೀಲ್ದಾರ (ಪ್ರಭಾರ) ಎಂದು ನಮೂದಿಸಿರಬೇಕು.
2. **ವಿದ್ಯಾರ್ಥಿಗಳು ಪ್ರವೇಶಾತಿಗೆ ನೀಡುವ ಎಲ್ಲಾ ಪ್ರಮಾಣ ಪತ್ರಗಳ 3 ಸೆಟ್ ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳ ಸಹಿ ಮತ್ತು ಸೀಲನ್ನು ಪಡೆದು ತಾವೇ ಇಟ್ಟುಕೊಂಡಿರಬೇಕು..**
3. ವಿಶ್ವವಿದ್ಯಾಲಯದಿಂದ ಪ್ರವೇಶಾತಿ ಮಂಜೂರಾಗುವವರೆಗೆ ಮೂಲ ದಾಖಲಾತಿಗಳವ್ನು ಯಾವುದೇ ಕಾರಣಕ್ಕೂ ಹಿಂದಿರಗಗಿಸಲಾಗುವುದಿಲ್ಲ.

**ಕಾಲೇಜಿನ ಶಿಸ್ತಿಗೆ ಸಂಬಂಧಿಸಿರುವ ನಿಯಮಗಳು :**

(೧) ಈ ಕಾಲೇಜಿಗೆ ಸೇರಿರುವ ಎಲ್ಲಾ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಪ್ರೌಢರಾಗಿದ್ದಾರೆ; ಹೊಣೆ ಅರಿತವರಾಗಿದ್ದಾರೆ ಎಂಬುದಾಗಿ ಎಣಿಸಲಾಗುತ್ತದೆ. ಆದ್ದರಿಂದ ಅವರೆಲ್ಲರೂ ಎಲ್ಲಾ ವಿಚಾರದಲ್ಲಿ ಶಿಸ್ತು, ಸಭ್ಯತೆ ಸಜ್ಜನಿಕೆಯಿಂದ ವರ್ತಿಸುತ್ತಾರೆ ಎಂಬುದಾಗಿ ನಿರೀಕ್ಷಿಸಲಾಗುತ್ತದೆ.

(೨) ವಿದ್ಯಾರ್ಥಿ/ ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ/ಕಾಲೇಜು ಕಾಲ-ಕಾಲಕ್ಕೆ ರೂಪಿಸಿ ಪ್ರಕಟಿಸುವ ನಿಯಮ ನಿಬಂಧನೆಗಳಿಗೆ ಬದ್ಧರಾಗಿ, ಅವುಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು.

(೩) ಪ್ರತಿ ವಿಷಯದಲ್ಲಿಯೂ **೭೫**%ರಷ್ಟಾದರೂ ಹಾಜರಾತಿ ಪಡೆದುಕೊಳ್ಳಲೇ ಬೇಕು.

(೪) ಅವರು ನಾಜೂಕಾಗಿ, ಒಪ್ಪ ಓರಣವಾಗಿದ್ದುಕೊಂಡು, ತರಗತಿಗಳಿಗೆ ಹಾಜರಾಗಬೇಕು ಮತ್ತು ಅಧ್ಯಯನಕ್ಕೆ ಬೇಕಾದ ಟಿಪ್ಪಣಿ-ಪುಸ್ತಕ, ಪಠ್ಯ-ಪುಸ್ತಕ, ಪ್ರಯೋಗ-ದಾಖಲೆ-ಪುಸ್ತಕ ಇತ್ಯಾದಿಗಳನ್ನು ಪ್ರತಿದಿನ ತಪ್ಪದೆ ತರತಕ್ಕದ್ದು.

(೫) ಅವರು ಶಿಕ್ಷಕರು ಮತ್ತು ಕಾಲೇಜು, ಕಚೇರಿ ಹಾಗೂ ಗ್ರಂಥ ಭಂಡಾರದ ಸಿಬ್ಬಂದಿ, ಸಹಪಾಠಿ ಹಾಗೂ ಸಾರ್ವಜನಿಕರ ವಿಷಯದಲ್ಲಿ ವಿಧೇಯತೆ ನಮ್ರತೆಯಿಂದ ನಡೆದುಕೊಳ್ಳಬೇಕು.

(೬) ಅವರು ಕಾಲೇಜು ಆವರಣ, ತರಗತಿ ಕೊಠಡಿಗಳು, ಗ್ರಂಥಾಲಯ, ಪ್ರಯೋಗ ಶಾಲೆ, ಆವರಣಗಳು ಚೊಕ್ಕಟವಾಗಿರುವಂತೆ ನೋಡಿಕೊಳ್ಳಬೇಕು.

(೭) ಕಾಲೇಜಿನ ಆವರಣ/ತರಗತಿಗಳಲ್ಲಿ ಅಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಮೇಲೆ ರ್‍ಯಾಗಿಂಗ್, ಲೈಂಗಿಕ ಕಿರುಕುಳಕ್ಕೆ ಅವಕಾಶವಿರುವುದಿಲ್ಲ. (ಸರ್ಕಾರಿ ಆದೇಶವನ್ನು ಮುದ್ರಿಸಲಾಗಿದೆ.)

(೮) ವಿದ್ಯಾರ್ಥಿ ಕಾಲೇಜಿನ ಕಚೇರಿ ಅಥವಾ ಗ್ರಂಥಾಲಯಕ್ಕೆ ಇಲ್ಲವೆ ಪ್ರಾಂಶುಪಾಲರ ಬಳಿ ಹೋದಾಗಲೆಲ್ಲ ತನ್ನ ಗುರುತಿನ ಚೀಟಿಯನ್ನು ತೋರಿಸಬೇಕು. ವಿದ್ಯಾರ್ಥಿ ಕಾಲೇಜಿನ ಆವರಣದಲ್ಲಿರುವಾಗ ಗುರುತಿನ ಚೀಟಿ ಹೊಂದಿರಲೇಬೇಕು.

(೯) ಕಾಲೇಜಿನ ಅಥವಾ ಇಲಾಖೆಗಳ ಪ್ರಕಟಣಾ-ಹಲಗೆಯನ್ನು ದಿನವೂ ತಪ್ಪದೆ ನೋಡಬೇಕಾದುದು ಪ್ರತಿ ವಿದ್ಯಾರ್ಥಿಯ ಹೊಣೆಗಾರಿಕೆ.

(೧೦) ಮಾರ್ಗದರ್ಶನಕ್ಕಾಗಿ ವಿದ್ಯಾರ್ಥಿಯು ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಯನ್ನು ಸಂಪರ್ಕಿಸತಕ್ಕದ್ದು.

(೧೧) ವಿದ್ಯಾರ್ಥಿಗಳ ತಂದೆ-ತಾಯಂದಿರು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಯನ್ನು ತಿಳಿಯಲು ಪದೇ ಪದೇ ಪ್ರಾಂಶುಪಾಲರನ್ನು ಹಾಗೂ ಶಿಕ್ಷಕರನ್ನು ಭೇಟಿ ಮಾಡಬಹುದು. ಅವರು ತಮ್ಮ ಮಕ್ಕಳನ್ನು ಈ ಮಹಾನಾಡಿನ ಸುಶಿಕ್ಷಿತ, ಸುಸಂಸ್ಕೃತ, ಸಭ್ಯ, ಉಪಯುಕ್ತ ಹಾಗೂ ಜವಾಬ್ದಾರಿ ಅರಿತ ನಾಗರೀಕರನ್ನಾಗಿ ರೂಪಿಸುವ ಕಷ್ಟಕರವಾದ, ಆದರೆ ಪ್ರಶಂಸಾರ್ಹವೂ, ಮಹತ್ತ್ವಪೂರ್ಣವೂ ಆದ ಕಾರ್ಯದಲ್ಲಿ ಸಂಪೂರ್ಣ ಸಹಕಾರ ನೀಡುತ್ತಾರೆಂಬುದು ನಮ್ಮ ವಿಶ್ವವಿದ್ಯಾನಿಲಯದ ಆಶಯವಾಗಿದೆ.

(೧೨) ಕಾಲೇಜಿನ ಆವರಣದಲ್ಲಿ ಮೊಬೈಲ್ ಫೋನ್ ಬಳಸುವುದನ್ನು ನಿಷೇಧಿಸಲಾಗಿದೆ.

(೧೩) ಧೂಮಪಾನ, ಡ್ರಗ್ಸ್ ಸೇವನೆ, ಮದ್ಯಪಾನ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

(೧೪) ಯಾವುದೇ ರೀತಿಯ ರ್‍ಯಾಗಿಂಗ್ ನಿಷಿದ್ಧ ಮತ್ತು ದಂಡನಾರ್ಹ.

(೧೫) ಯಾವುದೇ ಸಂದರ್ಭದಲ್ಲಿಯೂ ಅನುಚಿತ ನಡತೆಯನ್ನು ಸಹಿಸುವುದಿಲ್ಲ ಅಂತಹ ವಿದ್ಯಾರ್ಥಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

## ವಿದ್ಯಾರ್ಥಿಗಳಿಗಾಗಿ ಇರುವ ಸೌಲಭ್ಯಗಳು

(೧) **ವಿದ್ಯಾರ್ಥಿ ನಿಲಯಗಳು**

1. ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯ, ಮಹಾರಾಜ ಕಾಲೇಜು ಹತ್ತಿರ, ಮೈಸೂರು
2. ಗೌತಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು
3. ವಿದ್ಯಾರ್ಥಿನಿಯರಿಗೂ ಸಹ ಹಾಸ್ಟಲ್ ಸೌಲಭ್ಯ ಇರುತ್ತದೆ
4. ಡಾ. ಅಂಬೇಡ್ಕರ್ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು
5. ವಿಲೇಜ್ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು.

(೨) **ಉಪಾಹಾರ ಗೃಹ :** ಮಹಾರಾಜ ಕಾಲೇಜಿನ ಮುಖ್ಯ ಭವನದ ಬಳಿ ಒಂದು ಉಪಾಹಾರ ಗೃಹವಿದೆ.

(೩) **ಆರೋಗ್ಯ ಕೇಂದ್ರ :** ಮಹಾರಾಜ ಕಾಲೇಜಿನ ಆವರಣದಲ್ಲಿ ಒಂದು ಸುಸಜ್ಜಿತ ಆರೋಗ್ಯ ಕೇಂದ್ರವಿದೆ.

(೪) **ಗ್ರಂಥಾಲಯ :** ಸ್ನಾತಕಪೂರ್ವ ವಿದ್ಯಾರ್ಥಿಗಳಿಗಾಗಿ ಒಂದು ಅಧ್ಯಯನ ಕೇಂದ್ರವನ್ನು ಒಳಗೊಂಡಿರುವ ಗ್ರಂಥಭಂಡಾರವಿದೆ. ಇದು ನಮ್ಮ ಪದವಿ ವಿದ್ಯಾರ್ಥಿಗಳ ಮತ್ತು ಮೈಸೂರು ನಗರದಲ್ಲಿರುವ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳ ಮತ್ತು ಶಿಕ್ಷಕ ವೃಂದದವರ ಬೌದ್ಧಿಕಾವಶ್ಯಕತೆಗಳನ್ನು ಪೂರೈಸಿಕೊಡುತ್ತದೆ. ಎರಡು ಲಕ್ಷದ ಮೂವತ್ತೆರಡು ಸಾವಿರ ಮಸ್ತಕಗಳನ್ನೂ ಹನ್ನೊಂದು ನಿಯತಕಾಲಿಕೆಗಳನ್ನೂ ಒಳಗೊಂಡಿರುವ ಗ್ರಂಥಾಲಯ ಇದಾಗಿದೆ.

(೫) **ವಾಚನಾಲಯ:** ನಮ್ಮ ಕಾಲೇಜಿನಲ್ಲಿ ಪ್ರಜಾವಾಣಿ, ಕನ್ನಡ ಪ್ರಭ, ವಿಜಯವಾಣಿ, ಸಂಯುಕ್ತ ಕರ್ನಾಟಕ,

ವಿಜಯ ಕರ್ನಾಟಕ, ದ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್, ಟೈಮ್ಸ್ ಆಫ್ ಇಂಡಿಯ, ಎಕನಾಮಿಕ್ ಟೈಮ್ಸ್ ಇತ್ಯಾದಿ ದೈನಂದಿನ ಪತ್ರಿಕೆಗಳನ್ನೂ; ದ ವೀಕ್, ಎಂಪ್ಲಾಯ್‌ಮೆಂಟ್ ನ್ಯೂಸ್ ಇತ್ಯಾದಿ ಅನೇಕ ಸಾಪ್ತಾಹಿಕ/ಮಾಸಿಕ ಪತ್ರಿಕೆಗಳನ್ನೂ ಉಳ್ಳ ಅತ್ಯುತ್ತಮ ವಾಚನಾಲಯವಿದೆ.

(೬) **ಕ್ರೀಡಾ ಸೌಲಭ್ಯಗಳು** : ಪ್ರತ್ಯೇಕವಾದ ದೈಹಿಕ ಶಿಕ್ಷಣ ನಿರ್ದೇಶನಾಲಯವು ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತದೆ. ಒಳ ಹಾಗೂ ಹೊರಾಂಗಣ ಕ್ರೀಡೆಗಳಿಗಾಗಿ ವ್ಯಾಪಕವಾದ ಕ್ರೀಡಾಂಗಣ ಹಾಗೂ ಚೆನ್ನಾಗಿ ವ್ಯವಸ್ಥಿತಗೊಳಿಸಲಾದ ಈಜುವ ಕೊಳವೂ ವಿಶ್ವವಿದ್ಯಾನಿಲಯದ ಸ್ತ್ರೀ–ಪುರುಷ ಕ್ರೀಡಾಸಕ್ತರಿಗೆ ಎಲ್ಲಾ ಸೌಕರ್ಯಗಳನ್ನು ನೀಡುತ್ತಿವೆ. ಸ್ನಾತಕೋತ್ತರ ಆವರಣದಲ್ಲಿ ಒಂದು ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಇವನ್ನು ಉಪಯೋಗಿಸಿಕೊಳ್ಳುವ ಅವಕಾಶ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಇದೆ.

ನಮ್ಮ ಕಾಲೇಜಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ಲಭ್ಯವಿರುವ ಕ್ರೀಡಾ ಸೌಲಭ್ಯಗಳ ವಿವರಗಳು ಈ ರೀತಿ ಇವೆ –

**ಹೊರಾಂಗಣ (Out Door)**

| | | |
|---|---|---|
| 1. | ಕ್ರಿಕೆಟ್ ಮೈದಾನ (ಮ್ಯಾಟಿಂಗ್ ವಿಕೆಟ್) – ರಾಷ್ಟ್ರೀಯ ಮಟ್ಟದ್ದು | 1 |
| 2. | ಫುಟ್‌ಬಾಲ್ ಮೈದಾನ – ರಾಷ್ಟ್ರೀಯ ಮಟ್ಟದ್ದು | 1 |
| 3. | ಹ್ಯಾಂಡ್ ಬಾಲ್ – ರಾಷ್ಟ್ರೀಯ ಮಟ್ಟದ್ದು | 1 |
| 4. | ಹಾಕಿ ಮೈದಾನ – ರಾಷ್ಟ್ರೀಯ ಮಟ್ಟದ್ದು | 1 |
| 5. | ಬಾಸ್ಕೇಟ್ ಬಾಲ್ ಕೋರ್ಟ್ (ಅಭ್ಯಾಸಕ್ಕಾಗಿ) | 1 |
| 6. | ಖೋ–ಖೋ ಮೈದಾನ – ರಾಷ್ಟ್ರೀಯ ಮಟ್ಟದ್ದು | 2 |
| 7. | ಕಬಡ್ಡಿ ಮೈದಾನ – ರಾಷ್ಟ್ರೀಯ ಮಟ್ಟದ್ದು | 2 |
| 8. | ಬಾಲ್ ಬ್ಯಾಡ್ ಮಿಂಟನ್ ಕೋರ್ಟ್– ರಾಷ್ಟ್ರೀಯ ಮಟ್ಟದ್ದು | 2 |
| 9. | ವಾಲಿಬಾಲ್ ಮೈದಾನ – ರಾಷ್ಟ್ರೀಯ ಮಟ್ಟದ್ದು | 2 |
| 10. | ವಿವಿಧೋದ್ದೇಶ ವ್ಯಾಯಾಮ ಶಾಲೆ ವುಡನ್ 120’ * 100’ (Indoor) ಫ್ಲೋರ್ 12’ * 15’ | |
| | (ಅ) ಷಟಲ್ ಕೋರ್ಟ್ | 3 |
| | (ಆ) ಟೇಬಲ್ ಟೆನ್ನಿಸ್ | 3 |
| | (ಇ) ಜಿಮ್ನಾಸ್ಟಿಕ್ಸ್‌ನ ಎಲ್ಲ ಸಲಕರಣೆಗಳು | |
| | (ಈ) ಐಸೊಮೆಟ್ರಿಕ್ ಬಾರ್ಸ್ | |
| | (ಉ) ಟೆನ್ನಿಸ್ ಕೋರ್ಟ್ | 4 |
| | (ಋ) ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಸೌಲಭ್ಯ | |
| 11. | ಮಲ್ಟಿ ಜಿಮ್ – 16 ವಿಭಾಗಗಳು | 1 (ಒಂದು ಸೆಟ್) |
| 12. | ಅಥ್ಲೆಟಿಕ್ಸ್ ಟ್ರ್ಯಾಕ್ – 8 ಲೇನ್‌ಗಳು – ಸಿಂಥೆಡ್ ಟ್ರ್ಯಾಕ್ | 1 ಅಂಕಣ |

13. ಈಜುಕೊಳ – 8 ಲೇನ್‌ಗಳು – ಡೈವಿಂಗ್ –

ಅಖಿಲ ಭಾರತ ಮಟ್ಟದಲ್ಲಿ ದೇಶದಲ್ಲಿಯೇ ಒಂದೇ ಕಡೆ ಎಲ್ಲಾ ಕ್ರೀಡಾ ಸೌಲಭ್ಯಗಳನ್ನು ಹೊಂದಿರುವ ಕೆಲವೇ ಕೆಲವು ವಿಶ್ವವಿದ್ಯಾನಿಲಯಗಳ ಪೈಕಿ ಮೈಸೂರು ವಿಶ್ವವಿದ್ಯಾನಿಲಯವೂ ಒಂದು.

(೭) **ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸಭಾಂಗಣಗಳು :** ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆಗಳ ಸೌಲಭ್ಯಕ್ಕಾಗಿ ಶತಮಾನೋತ್ಸವ ಭವನದಲ್ಲಿ ಸುಸಜ್ಜಿತ ಸಭಾಂಗಣವಿದೆ. ಅದಲ್ಲದೆ ಜೂನಿಯರ್ ಹಾಗೂ ಸೀನಿಯರ್ ಬಿ.ಎ. ಹಾಲ್‌ಗಳನ್ನು ಸಹ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಬಹುದಾಗಿದೆ.

(೮) **ಅನಂತಯಾತ್ರಿ – ಕಾಲೇಜು ವಾರ್ಷಿಕ ಸಂಚಿಕೆ :** ಸುದೀರ್ಘ ಬೌದ್ಧಿಕ ಯಾತ್ರೆಯನ್ನು ಸೂಚಿಸುವ ಅನಂತಯಾತ್ರಿ ಎಂಬ ವಾರ್ಷಿಕ ಸಂಚಿಕೆಯನ್ನು ವಿದ್ಯಾರ್ಥಿಗಳ ಜ್ಞಾನವರ್ಧನೆಗೆ ಮತ್ತು ಅವರ ಲೇಖನ ಪ್ರತಿಭೆಯ ಅಭಿವ್ಯಕ್ತಿಗೆ ಅವಕಾಶ ಒದಗಿಸುವುದಕ್ಕಾಗಿ ಪ್ರತಿವರ್ಷವೂ ಕಾಲೇಜು ಹೊರತರುತ್ತಿದೆ.

(೯) **ಅಂಚೆ ಮತ್ತು ಬ್ಯಾಂಕಿಂಗ್ ಸೌಲಭ್ಯಗಳು :** ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಆವರಣದಲ್ಲಿ ಇರುವ ಅಂಚೆ ಕಚೇರಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ – ಇವುಗಳನ್ನು ನಮ್ಮ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬಹುದು.

(೧೦) **ವಿದ್ಯಾರ್ಥಿವೇತನ/ಸಹಾಯಧನ ಇತ್ಯಾದಿ:** ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳಿಗಾಗಿ ಭಾರತ ಸರ್ಕಾರದ ಮೆಟ್ರಿಕ್ ತರುವಾಯದ ವಿದ್ಯಾರ್ಥಿ ವೇತನಗಳು; ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯ ನೀಡುವ ವಿದ್ಯಾರ್ಥಿ ವೇತನಗಳು; ರಾಜಕೀಯ ಸಂತ್ರಸ್ತರ ಮಕ್ಕಳಿಗಾಗಿ ಇರುವ ವಿದ್ಯಾರ್ಥಿ ವೇತನ; ರಕ್ಷಣಾ ಖಾತೆಯವರ ಮಕ್ಕಳಿಗಾಗಿ ಇರುವ ವಿದ್ಯಾರ್ಥಿ ವೇತನ; ನಮ್ಮ ಕಾಲೇಜಿನ ವಿದ್ಯಾರ್ಥಿ ಕ್ಷೇಮನಿಧಿಯಿಂದ ನೀಡಲಾಗುವ ವಿದ್ಯಾರ್ಥಿವೇತನ/ಸಹಾಯ ಧನ ಇತ್ಯಾದಿಗಳಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುತ್ತಿವೆ. I, IIA, IIB, IIIA and IIIB ಗುಂಪಿನ ವಿದ್ಯಾರ್ಥಿಗಳಿಗೆ ಫ್ರೀ ಸ್ಕಾಲರ್‌ಶಿಪ್ ಇದೆ. ವಿಶ್ವವಿದ್ಯಾನಿಲಯದ 'ಕಲಿಕೆ ಮತ್ತು ಗಳಿಕೆ' ಯೋಜನೆಯಡಿಯಲ್ಲೂ ಹಣಸಂಪಾದನೆಗೆ ಅವಕಾಶವಿದೆ. 'ಅಂಗವಿಕಲರಿಗೆ ಧನಸಹಾಯ' ಎಂಬ ಯೋಜವೆಯಡಿ ವಿಶ್ವವಿದ್ಯಾಲಯವು ಅಂಗವಿಕಲರಿಗೆ ಧನಸಹಾಯ ಮಾಡುತ್ತದೆ. ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳ, ಸಂಶೋಧಕರ, ಹಾಗೂ ಉದ್ಯೋಗಿಗಳ ಯೋಗಕ್ಷೇಮಕ್ಕಾಗಿ ಒಂದು ಪ್ರತ್ಯೇಕ ಸೆಲ್ ಇದೆ. ಇದು ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿ ಸಹಾಯಧನವನ್ನು ಕೊಡುತ್ತದೆ. ಸಂಶೋಧನ ವಿದ್ಯಾರ್ಥಿವೇತನವನ್ನೂ ಸಹ ಈ ಸೆಲ್ ನೀಡುತ್ತದೆ.

(೧೧) **ಎನ್.ಸಿ.ಸಿ. :** ಎನ್.ಸಿ.ಸಿ.ಯು ಖುಜುರು ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ದಿನಾಂಕ ೧೬–೭–೧೯೪೮ರಂದು ಭಾರತದಾದ್ಯಂತ ಅಧಿಕೃತವಾಗಿ ಜಾರಿಗೆ ಬಂದಿತು. ಎನ್.ಸಿ.ಸಿ.ಯ ಮೂಲ ಉದ್ದೇಶ – ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ ಗುಣ, ಸಮಯ ಪ್ರಜ್ಞೆಗಳನ್ನು ತರುವುದು ಮತ್ತು ಅವರನ್ನು ಉತ್ತಮ ನಾಗರಿಕರನ್ನಾಗಿ ಮಾಡುವುದು.

ಎನ್.ಸಿ.ಸಿ.ಯಲ್ಲಿ ಭೂದಳ, ನೌಕಾದಳ ಹಾಗೂ ವಾಯುದಳ ಎಂದು ಮೂರು ವಿಭಾಗಗಳಿವೆ.

ಈ ಮೂರು ಶಾಖೆಗಳಲ್ಲಿ ಯಾವುದಾದರೂ ಒಂದು ಶಾಖೆಗೆ ಸೇರಲು ವಿದ್ಯಾರ್ಥಿಗೆ ಅವಕಾಶವಿರುತ್ತದೆ. ಎನ್.ಸಿ.ಸಿ.ತರಬೇತಿ ಪಡೆಯುವುದರಿಂದ ಧೈರ್ಯ, ಪ್ರಗತಿಪರತೆ, ತೃಪ್ತಿ, ಜೀವನದ ಸವಾಲುಗಳನ್ನು ಎದುರಿಸುವ ಶಕ್ತಿ, ತೃಪ್ತಿ – ಇವುಗಳನ್ನಪೇಕ್ಷಿಸುವ ಜೀವನೋಪಾಯವನ್ನು ಆರಿಸಿಕೊಳ್ಳುವ ಸಾಮರ್ಥ್ಯ ಬರುತ್ತದೆ.

ಭಾರತ ದೇಶದಲ್ಲಿ ಒಟ್ಟು ಎನ್.ಸಿ.ಸಿ.ವಿದ್ಯಾರ್ಥಿಗಳ ಸಂಖ್ಯೆ ೧೬ ಲಕ್ಷ. ನಮ್ಮ ಘಟಕದಲ್ಲಿ ಒಟ್ಟು ೧೫೦ ವಿದ್ಯಾರ್ಥಿಗಳಿಗೆ ಎನ್.ಸಿ.ಸಿ. ಸೇರಲು ಅವಕಾಶವಿರುತ್ತದೆ..

(೧೨) **ಎನ್.ಎಸ್.ಎಸ್. (ರಾಷ್ಟ್ರೀಯ ಸೇವಾ ಯೋಜನೆ) :** ಭಾರತ ಸರ್ಕಾರ ಪ್ರಾಯೋಜಿತವಾದ; ವಿದ್ಯಾರ್ಥಿಗಳ ಸಮಯ, ಪ್ರತಿಭೆ ಹಾಗೂ ಶಕ್ತಿಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದರ ಮೂಲಕ ರಾಷ್ಟ್ರನಿರ್ಮಾಣ ಮಾಡುವ ಉದ್ದೇಶವುಳ್ಳ ಎನ್.ಎಸ್.ಎಸ್. (ರಾಷ್ಟ್ರೀಯ ಸೇವಾ ಯೋಜನೆ) ೧೯೭೦ರಿಂದ ಜಾರಿಯಲ್ಲಿದೆ. ಮೈಸೂರು ವಿಶ್ವವಿದ್ಯಾಲಯದ ೫೦ ಕಾಲೇಜುಗಳಲ್ಲಿ ೬೨ ಎನ್.ಎಸ್.ಎಸ್. ಘಟಕಗಳಿವೆ; ನಮ್ಮ ಕಾಲೇಜಿನಲ್ಲಿ ಎರಡು ಎನ್.ಎಸ್.ಎಸ್. ಘಟಕಗಳಿವೆ. ಪ್ರತಿ ಘಟಕದಲ್ಲಿ ನೂರು ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳಲಾಗುವುದು. ಈ ಯೋಜನೆಗೆ ಸೇರಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾಲೇಜುಗಳ ಒಳಗೆ ಹಾಗೂ ಹೊರಗೆ ಸಮುದಾಯ–ಸೇವಾ ಚಟುವಟಿಕೆಗಳಲ್ಲಿ ಮತ್ತು ಕಾಲೇಜು, ಅಂತರ–ಕಾಲೇಜು ಹಾಗೂ ಅಂತರ–ವಿಶ್ವವಿದ್ಯಾನಿಲಯ ಶಿಬಿರಗಳಲ್ಲಿ ಭಾಗವಹಿಸುತ್ತಾರೆ.

(೧೩) **ಯೂತ್ ರೆಡ್ ಕ್ರಾಸ್ :** ಯುವಜನರಲ್ಲಿ ಸಮಾಜಸೇವಾ ಚಟುವಟಿಕೆಗಳನ್ನು ಉತ್ತೇಜಿಸುವುದು ಯುವ ರೆಡ್ ಕ್ರಾಸ್‌ನ ಉದ್ದೇಶ.

(೧೪) **ಯುವ ಸ್ಕೌಟ್ಸ್ & ಗೈಡ್ಸ್ :** ಈ ಶೈಕ್ಷಣಿಕ ವರ್ಷದಿಂದ ಸ್ಕೌಟ್ಸ & ಗೈಡ್ಸ್‌ಗಳು ನಮ್ಮ ಕಾಲೇಜಿನಲ್ಲಿ ಆರಂಭಿಸಲ್ಪಡುತ್ತವೆ. ಯುವಜನರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವುದು ಇದರ ಉದ್ದೇಶ.

**(೧೫) ಉದ್ಯೋಗ ಮಾಹಿತಿ ಕಛೇರಿ *Employment Information and Guidance Bureau* (UEIGB)**

ಮಾನಸಗಂಗೋತ್ರಿಯಲ್ಲಿರುವ ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿ ಹಾಗೂ ಮಾರ್ಗದರ್ಶನ ಕಛೇರಿಯು ಲಘು ಪ್ರಕಟಣೆಗಳ ಮೂಲಕ ಮತ್ತು ವಿವಿಧ ಕಾಲೇಜುಗಳಲ್ಲಿ ಉಪನ್ಯಾಸ ಹಾಗೂ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದರ ಮೂಲಕ, ಉದ್ಯೋಗ ಹಾಗೂ ಶೈಕ್ಷಣಿಕ ವಿಷಯಗಳ ಬಗ್ಗೆ ಮಾಹಿತಿಗಳನ್ನು ಒದಗಿಸಿಕೊಡುತ್ತದೆಯಲ್ಲದೆ, ವಿಶ್ವವಿದ್ಯಾನಿಲಯದ ಇತರ ವಿಷಯಗಳ ಬಗ್ಗೆ ಸಹ ಮಾಹಿತಿಗಳನ್ನು ಒದಗಿಸುತ್ತದೆ. ಇತರ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಪರರಾಷ್ಟ್ರಗಳಲ್ಲಿ ಇರುವ ವಿವಿಧ ಕೋರ್ಸ್‌ಗಳ ಬಗ್ಗೆಯೂ ಮಾಹಿತಿಗಳು ಇಲ್ಲಿ ದೊರೆಯುತ್ತವೆ. ವಿದ್ಯಾರ್ಥಿಗಳು ಇದರ ಉಪಯೋಗವನ್ನು ಪಡೆದುಕೊಳ್ಳಲು ಇಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

**(೧೬) ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ:**

ವಿದ್ಯಾರ್ಥಿ ಕ್ಷೇಮಪಾಲನೆಯ ಒಂದು ಪ್ರತ್ಯೇಕ ನಿರ್ದೇಶನಾಲಯವು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸೇವಾಯೋಜನೆಗಳನ್ನು ನಿರೂಪಿಸಿ ನೋಡಿಕೊಳ್ಳುತ್ತದೆ; ಶೈಕ್ಷಣಿಕ ಹಾಗೂ ಪ್ರವೇಶ ವಿಷಯಗಳ ಬಗ್ಗೆ ಮಾಹಿತಿ

ಹಾಗೂ ಮಾರ್ಗದರ್ಶನವನ್ನು ಒದಗಿಸಿಕೊಡುತ್ತದೆ.

ಅಂಗವಿಕಲರಿಗೆ ಧನ ಸಹಾಯಕ ಕಾರ್ಯಕ್ರಮಗಳನ್ನು ಮತ್ತು ಎಲ್ಲ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕಲಿಕೆ ಹಾಗೂ ಗಳಿಕೆ ಮುಂತಾದ ವಿವಿಧ ಧನ ಸಹಾಯ ಯೋಜನೆಗಳನ್ನು ಈ ನಿರ್ದೇಶನಾಲಯವು ರೂಪಿಸಿ ನಡೆಸುತ್ತದೆ.

ಇದರೊಂದಿಗೆ ಸಾಹಿತ್ಯಾತ್ಮಕ ಹಾಗೂ ಸಾಂಸ್ಕೃತಿಕ ಸ್ಪರ್ಧೆ, ಅಂತರ–ಕಾಲೇಜು ಮತ್ತು ಅಂತರ–ವಿಶ್ವವಿದ್ಯಾನಿಲಯ ಸ್ಪರ್ಧೆಗಳು ಮುಂತಾದ ಸಹ–ಶೈಕ್ಷಣಿಕ ಕಾರ್ಯಕ್ರಮಗಳನ್ನೂ ಏರ್ಪಡಿಸಿ ನಡೆಸಲಾಗುತ್ತದೆ.

ಪ್ರವೇಶ ಹಾಗೂ ವಸತಿಯ ವಿಚಾರದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ನೆರವನ್ನೂ ನೀಡಲಾಗುತ್ತದೆ.

ವಿಶ್ವವಿದ್ಯಾನಿಲಯದ ಎಲ್ಲಾ ಸೌಲಭ್ಯಗಳನ್ನು ಅಂಗಸಂಸ್ಥೆಯಾಗಿರುವ ಮಹಾರಾಜ ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಹಾಗೂ ಕ್ರಾಫರ್ಡ್ ಭವನ ನೀಡುವ ಅನೇಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

**(೧೭) ಬಹುಮಾನಗಳು ಮತ್ತು ವಿದ್ಯಾರ್ಥಿವೇತನಗಳು**

ಗರಿಷ್ಠ ಅಂಕ ಗಳಿಸಿದ ಬಿ.ಎ., ಬಿ.ಕಾಂ., ಬಿ.ಬಿ.ಎ. ವಿದ್ಯಾರ್ಥಿಗೆ; ಅತ್ಯುತ್ತಮ ಎನ್. ಎಸ್ ಎಸ್ ವಿದ್ಯಾರ್ಥಿಗೆ; ಅತ್ಯುತ್ತಮ ಎನ್. ಸಿ. ಸಿ. ವಿದ್ಯಾರ್ಥಿಗೆ; ಅತ್ಯುತ್ತಮ ಕ್ರೀಡಾಪಟುವಿಗೆ; ಪಠ್ಯೇತರ ಚಟುವಟಿಕೆಯಲ್ಲಿ ಅತ್ಯುತ್ತಮ ವಿದ್ಯಾರ್ಥಿಗೆ; ಆಯ್ಕೆ ಮಾಡಲಾದ ಬಡ ಅರ್ಹ ವಿದ್ಯಾರ್ಥಿಗಳಿಗೆ ಕಾಲೇಜಿನ ವಿದ್ಯಾರ್ಥಿ ಕ್ಷೇಮನಿಧಿಯಿಂದ ಬಹುಮಾನ ನೀಡಲಾಗುತ್ತದೆ. ಇದಲ್ಲದೆ ಈ ಕೆಳಗಿನ ದತ್ತಿ ಬಹುಮಾನಗಳಿವೆ.

## ದತ್ತಿ ಬಹುಮಾನಗಳ ವಿವರ

೧. **ಪ್ರೊ॥ ಜಿ. ಕೆ. ವೆಂಕಣಯ್ಯ ಸ್ಮಾರಕ ದತ್ತಿ ನಗದು ಬಹುಮಾನ** – ಬಿ.ಎ., ಪ್ರಥಮ ವರ್ಷದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೨. **ಪ್ರೊ॥ ಎಸ್. ವಿ. ರಂಗಣ್ಣ ಸ್ಮಾರಕ ನಗದು ಬಹುಮಾನ** – ಬಿ.ಎ., ಅಂತಿಮ ವರ್ಷದ ಐಚ್ಛಿಕ ಕನ್ನಡದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೩. **ಪ್ರೊ॥ ಎಸ್. ವಿ. ರಂಗಣ್ಣ ಸ್ಮಾರಕ ನಗದು ಬಹುಮಾನ** – ಬಿ.ಎ., ಅಂತಿಮ ವರ್ಷದ ಐಚ್ಛಿಕ ಇಂಗ್ಲೀಷ್‌ನಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೪. **ಪ್ರೊ॥ ಸ. ನ. ಗಾಯತ್ರಿ ದತ್ತಿ ನಗದು ಬಹುಮಾನ** – ಐಚ್ಛಿಕ ಕನ್ನಡದಲ್ಲಿ ಪ್ರಥಮ ವರ್ಷದಲ್ಲಿ; ದ್ವಿತೀಯ ವರ್ಷದಲ್ಲಿ; ತೃತೀಯ ವರ್ಷದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೫. **ಪ್ರೊ॥ ನಾಗಪ್ಪ ಸ್ಮಾರಕ ದತ್ತಿ ನಗದು ಬಹುಮಾನ** – ಅಂತಿಮ ವರ್ಷದಲ್ಲಿ ಐಚ್ಛಿಕ ಹಿಂದಿಯಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೬. **ಸಂಪೆಮನೆ ಕೃಷ್ಣಮೂರ್ತಿ ದತ್ತಿ ನಗದು ಬಹುಮಾನ** – ಪತ್ರಿಕೋದ್ಯಮದಲ್ಲಿ ಪ್ರಥಮ ವರ್ಷದಲ್ಲಿ; ದ್ವಿತೀಯ ವರ್ಷದಲ್ಲಿ; ತೃತೀಯ ವರ್ಷದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೭. **ಡಾ॥ ಹೆಚ್.ವಿ.ನಾರಾಯಣ ದತ್ತಿ ನಗದು ಬಹುಮಾನ** – ಸಮಾಜಶಾಸ್ತ್ರದಲ್ಲಿ ಅಂತಿಮ ವರ್ಷದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ

೮. **ಪ್ರೊ॥ ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ ದತ್ತಿ ನಗದು ಬಹುಮಾನ** – ರಾಜ್ಯಶಾಸ್ತ್ರದಲ್ಲಿ ಅಂತಿಮ ವರ್ಷದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೯. **ಭೂಗೋಳಶಾಸ್ತ್ರ ವಿಭಾಗದ ದತ್ತಿ ನಗದು ಬಹುಮಾನ** – ಅಂತಿಮ ವರ್ಷದಲ್ಲಿ ಭೂಗೋಳಶಾಸ್ತ್ರದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೧೦. **ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ಹೆಚುವರಿ ನಿಧಿ ದತ್ತಿ ಬಹುಮಾನ** – ಪ್ರಥಮ ವರ್ಷದಲ್ಲಿ; ದ್ವಿತೀಯ ವರ್ಷದಲ್ಲಿ; ತೃತೀಯ ವರ್ಷದಲ್ಲಿ ಅರ್ಥಶಾಸ್ತ್ರದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೧೧. **ಪ್ರೊ॥ ಯಾಮುನಾಚಾರ್ಯ ಸ್ಮಾರಕ ದತ್ತಿ ನಗದು ಬಹುಮಾನ** – ಅಂತಿಮ ವರ್ಷದಲ್ಲಿ ತತ್ತ್ವಶಾಸ್ತ್ರದಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೧೨. **ಪ್ರೊ॥ ಅಚ್ಯುತರಾವ್ ದತ್ತಿ ನಗದು ಬಹುಮಾನ** – ಅಂತಿಮ ಬಿ.ಎ. ಇತಿಹಾಸ ವಿದ್ಯಾರ್ಥಿಗಳಲ್ಲಿ ಗರಿಷ್ಠ ಅಂಕ ಗಳಿಸಿದ ವಿದ್ಯಾರ್ಥಿಗೆ.

೧೩. **ಶ್ರೀಮತಿ ಸುಬ್ಬಲಕ್ಷ್ಮಮ್ಮ ಸ್ಮಾರಕ ನಗದು ಬಹುಮಾನ** – ಪಠ್ಯೇತರ ಚಟುವಟಿಕೆಯಲ್ಲಿ ಅತ್ಯುತ್ತಮ ವಿದ್ಯಾರ್ಥಿಗೆ.

೧೪. **ಡಾ॥ ನಾ. ರತ್ನ ದತ್ತಿ ನಗದು ಬಹುಮಾನ** – ನಾಟಕದಲ್ಲಿ ಅತ್ಯುತ್ತಮ ವಿದ್ಯಾರ್ಥಿಗೆ.

**(೧೮) ಸ್ಥಾನಿಕ ಘಟಕ :** ಉದ್ಯಮ–ಶೈಕ್ಷಣಿಕ ಸಂಬಂಧದ ಅನುಕೂಲತೆಗಾಗಿ ನಮ್ಮ ಕಾಲೇಜು ಸುಪ್ರತಿಷ್ಠಿತ ಸ್ಥಾನಿಕ ಘಟಕವನ್ನು ಹೊಂದಿದೆ. ಸುಪ್ರತಿಷ್ಠಿತ ಕಂಪನಿಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರಿ ಪ್ರಾಯೋಜಿತ ಏಜೆನ್ಸಿಗಳು ಪ್ರಖ್ಯಾತ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿಯುತ ಕೆಲಸವನ್ನು ಕೈಗೊಳ್ಳುವಂತೆ ಉತ್ತೇಜನವನ್ನು ನೀಡುವುದರಲ್ಲಿ ತೀವ್ರ ಆಸಕ್ತಿಯನ್ನು ಸ್ಪಷ್ಟಪಡಿಸಿವೆ.

**(೧೯) ವಿಕಲಚೇತನ ಸಂಪನ್ಮೂನ ಕೇಂದ್ರ (Specially abled) :** ವಿಕಲ ಚೇತನರ (ದಿವ್ಯಾಂಗ ಚೇತನರ) ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದರ ಮೂಲಕ ಮತ್ತು ಅವರಿಗೆ ಸಾಧ್ಯವಿರುವ ಪರಿಹಾರಗಳನ್ನು ಕಲ್ಪಿಸುವುದರ ಮೂಲಕ ಅವರಿಗೆ ಸಹಾಯ ಮಾಡುವುದಕ್ಕಾಗಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.

## "ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ (ಶಿಸ್ತು ನಿಯಂತ್ರಣ) ಸುಗ್ರೀವಾಜ್ಞೆ 1989"

ನಂ.ಎ.ಸಿ.2/159/89–90 ತಾ.12ನೇ ಜೂನ್ 1989 ಈ ಕಾಯ್ದೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ 1976ರ ವಿಧೇಯಕವು ಅತ್ಯಾವಶ್ಯಕವಾಗಿ ಕೋರುವುದೆಂದರೆ –

1. **ಸಾಮಾನ್ಯ ನಿಯಮ** : ಮೈಸೂರು ವಿಶ್ವವಿದ್ಯಾನಿಲಯದ ಆಸಕ್ತಿಯನ್ನು ಸಂರಕ್ಷಿಸಿ ಕಾಪಾಡುವಲ್ಲಿ ತರ್ಕಬದ್ಧವಾದ ಹಂತಗಳನ್ನು ಖಾತ್ರಿ ಪಡಿಸಬೇಕಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ಅಶಿಸ್ತಿನಿಂದ ಕೂಡಿದ್ದಲ್ಲಿ ಶಿಸ್ತನ್ನು ಕಾಪಾಡಲು ಕಾನೂನುಬದ್ಧವಾಗಿ ಅವನ ಅಥವಾ ಅವಳ ಅಧ್ಯಯನದಲ್ಲಿ ಕಾನೂನು, ನಿರ್ಧಿಷ್ಟತೆ, ವಿಧಿಗಳು ಮತ್ತು ಕಾಯಿದೆಗಳನ್ನು ಜಾರಿಗೆ ತರುವುದು.

2. **ದಂಡನೆ ಅಥವಾ ಶಿಕ್ಷೆ :**

ಕೆಳಕಂಡ ಒಂದು ಅಥವಾ ಹೆಚ್ಚಿನ ದಂಡವನ್ನು ಒಳ್ಳೆಯ ಮತ್ತು ಅಗತ್ಯಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ

ನಿರ್ಣಯಿಸಬಹುದು.

1. ಎಚ್ಚರಿಕೆ ಅಥವಾ ಮುನ್ಸೂಚನೆ
2. ರೂ.500/– ಗಳನ್ನು ಮೀರದಂತಹ ದಂಡ
3. ವಿದ್ಯಾರ್ಥಿ ಸೇರಿರುವ ವಿಭಾಗದಿಂದ ಸೇರ್ಪಡೆಯನ್ನು ವಜಾ ಮಾಡುವುದು.
4. ವಸತಿ ನಿಲಯಗಳಿಂದ ಹೊರಹಾಕುವುದು
5. ವಿಶ್ವವಿದ್ಯಾನಿಲಯದ ಪದವಿ ತರಗತಿ ಹಾಗೂ ಸ್ನಾತಕೋತ್ತರ ವಿಭಾಗಗಳಿಂದ ಹೊರಹಾಕುವುದು.
6. ಮುಂದೆ ನಡೆಯುವ ಯಾವುದೇ ಪರೀಕ್ಷೆಗಳಿಗೆ ಕೂರದಂತೆ ನಿರಾಕರಿಸುವುದು ಅಥವಾ ಅನುಮತಿ ಕೊಡದಿರುವುದು.
7. ಪರೀಕ್ಷೆಗಳಿಂದ ಉಚ್ಚಾಟಿಸುವುದು.
8. ಪರೀಕ್ಷೆಗಳನ್ನು ತೆಗೆದುಕೊಂಡಿದ್ದಲ್ಲಿ ಫಲಿತಾಂಶವನ್ನು ತಡೆಹಿಡಿಯುವುದು..
9. ಕಾಲೇಜು ಹಾಗೂ ಸಂಸ್ಥೆಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯವು ತಿರಸ್ಕರಿಸಿದಲ್ಲಿ ಹಾಗೂ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ಪ್ರವೇಶಾತಿಯ ನಿಯಂತ್ರಣಗಳನ್ನು ನಿಯಂತ್ರಿಸಲ್ಪಟ್ಟ ಯಾವುದೇ ಬಗೆಯ ಶುಲ್ಕಗಳಲ್ಲಿ ವಿಧಿಗಳಾಗಲಿ ಇರುವುದಿಲ್ಲ.

3. ವಿದ್ಯಾರ್ಥಿಯು ಪರೀಕ್ಷೆಯ ಸಮಯದಲ್ಲಿ ದುರ್ವರ್ತನೆ ಅಥವಾ ಅನುಚಿತವಾಗಿ ವರ್ತಿಸಿದಾಗ ವಜಾಮಾಡಬಹುದು.

(ಎ) ವಿಶ್ವವಿದ್ಯಾನಿಲಯದ ಪರೀಕ್ಷಾಕೇಂದ್ರದ ಮುಖ್ಯಾಧಿಕಾರಿಯು ವಿದ್ಯಾರ್ಥಿಗಳಲ್ಲಿ ಕೆಳಕಂಡ ದುರ್ನಡತೆ ಅಥವಾ ದುರ್ವರ್ತನೆ ಕಂಡು ಬಂದಲ್ಲಿ ಪರೀಕ್ಷಾ ಕೇಂದ್ರದಿಂದ ಅಂತಹವರನ್ನು ದೂರವಿಡಬಹುದು (ಹೊರಹಾಕಬಹುದು).

1. ಪರೀಕ್ಷಾ ಸಮಯದಲ್ಲಿ ಸಹಾಯವಾಗುವಂತಹ ಯಾವುದೇ ಕಾಗದ, ಪುಸ್ತಕ ಅಥವಾ ನೋಟ್ಸ್‌ಗಳು ವಿದ್ಯಾರ್ಥಿಗಳ ಕಂಡು ಬಂದಲ್ಲಿ
2. ವಿದ್ಯಾರ್ಥಿಯು ಯಾವುದೇ ರೀತಿಯ ಸಹಾಯ ಕೊಡುವ/ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಅಥವಾ ಪೇಪರಿನಿಂದ ನೋಡಿ ನಕಲು ಮಾಡುತ್ತಿದ್ದರೆ ಅಥವಾ ಬೇರೆ ವಿದ್ಯಾರ್ಥಿಯ ಉತ್ತರ ಪತ್ರಿಕೆಯಿಂದ ನಕಲು ಮಾಡುತ್ತಿದ್ದರೆ.
3. ಯಾವುದೇ ವಿದ್ಯಾರ್ಥಿಯ ಬಳಿಯಲ್ಲಿ ಇಂಕಿಳಿಯುವ ಕಾಗದದಲ್ಲಿ ಅಥವಾ ಬೇರೆ ಯಾವುದಾದರು ಕಾಗದದಲ್ಲಿ ಪರೀಕ್ಷೆ ಸಮಯದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡು ಬಂದರೆ
4. ವಿದ್ಯಾರ್ಥಿಯು ಬೇರೆ ಯಾವುದೇ ಬಗೆಯಾದಂತಹ ಮಾರ್ಗಗಳನ್ನು ಪ್ರಯತ್ನಿಸಿ, ಬಳಸಿದಲ್ಲಿ.
5. ವಿದ್ಯಾರ್ಥಿಯು ತನ್ನ ಅಸ್ತಿತ್ವವನ್ನು ಉತ್ತರ ಪತ್ರಿಕೆಯಲ್ಲಿ ಗುರುತಿಸಿದ್ದರೆ ಅಥವಾ ಬೇರೆ ಚಿಹ್ನೆಗಳನ್ನು ಉತ್ತರ ಪತ್ರಿಕೆಯಲ್ಲಿ ಕಂಡುಕೊಂಡಾಗ (ತನ್ನ ಗುರುತಿಗೆ)
6. ವಿದ್ಯಾರ್ಥಿಯು ನಿಂದಿಸುವ ಭಾಷೆ ಬಳಸಿದಲ್ಲಿ ಅಥವಾ ವಿರುದ್ಧವಾದ ರೀತಿಯಲ್ಲಿ ವರ್ತಿಸಿದರೆ

7. ವಿದ್ಯಾರ್ಥಿಯು ಯಾರನ್ನಾದರೂ ಸಂಪರ್ಕಿಸಿದರೆ ಅಥವಾ ಪರೀಕ್ಷಕರನ್ನು ಸಂಪರ್ಕಿಸಲು ಪ್ರಯತ್ನಿಸಿದರೆ.

8. ಮೊದಲೆ ನಕಲಿ ತಯಾರು ಮಾಡಿಕೊಂಡಿದ್ದು ಅಥವಾ ಪರೀಕ್ಷೆಯಲ್ಲಿ ವಂಚಿಸಿದರೆ ಅಂದರೆ ಬೇರೆಯವರು ಉತ್ತರ ಪತ್ರಿಕೆಗಳನ್ನು ಕದ್ದು ಸಾಗಿಸಿದ್ದರೆ ಅಥವಾ ಮೋಸದಿಂದ ಬೇರೊಬ್ಬನ ಸೋಗು ಹಾಕಿ ಪರೀಕ್ಷೆ ಬರೆಯಲು ವಂಚಿಸಿದರೆ.

(ಬಿ) ಪರೀಕ್ಷಾ ಕೇಂದ್ರದ ಮುಖ್ಯಸ್ಥರಾಗಲಿ ಅಥವಾ ಪರೀಕ್ಷ ಪ್ರತಿಬಂಧರು ಯಾರಾದರಾಗಲಿ ಪರೀಕ್ಷಾ ಸಮಯದಲ್ಲಿ ದುರ್ನಡತೆ ಅಥವಾ ದುರಾಚಾರವನ್ನು ಕಂಡಲ್ಲಿ ಅವರನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಲ್ಲಿ ಕರೆದುಕೊಂಡು ಹೋಗುವುದು. ಹಾಗೆ ಆ ವಿದ್ಯಾರ್ಥಿ ಮುಂದೆ ಯಾವುದೇ ಪರೀಕ್ಷೆಗೆ ಕೂರದಂತೆ ಹಾಗೆಯೇ ಆ ವಿದ್ಯಾರ್ಥಿಯು ತಾನು ನಕಲು ಮಾಡುವ ಯಾವುದೇ ವಸ್ತುವನ್ನು ತೆಗೆದು, ಬೇರೆ ಜಾಗದಲ್ಲಿದ್ದು ಅಥವಾ ನಾಶ ಮಾಡುವುದಾಗಲಿ ಮಾಡದಂತೆ ನೋಡಿಕೊಳ್ಳುವುದು. ಅಂತಹ ಯಾವುದೇ ವಸ್ತುವನ್ನು ಆ ಕೊಠಡಿಗೆ ಮುಖ್ಯ ಪರೀಕ್ಷಕರು ಬರುವ ತನಕ ವಿದ್ಯಾರ್ಥಿ ತನ್ನ ಸುಪರ್ದಿಗೆ ಮೇಲ್ಕಂಡ ಏನನ್ನೂ ತೆಗೆದುಕೊಳ್ಳಬಾರದು, ಕೆಲವೊಮ್ಮೆ ಅನಿವಾರ್ಯವಾದಾಗ ಮಾತ್ರ ಅದನ್ನು ಮುಟ್ಟಬಹುದು.

(ಸಿ) ಮುಖ್ಯ ಅಧೀಕ್ಷಕರು ವಿದ್ಯಾರ್ಥಿಯನ್ನು ವಜಾ ಮಾಡುವ ಮೊದಲು ವಿದ್ಯಾರ್ಥಿಯು ಪರೀಕ್ಷೆಯಲ್ಲಿ ದುರ್ನಡತೆ ಅಥವಾ ದುರಾಚಾರಗಳನ್ನು ಎಸಗಿದ್ದಾನೆಂದು ನಿರ್ಧರಿಸಿಕೊಳ್ಳುವುದು. ಆಗ ಕೆಳಕಂಡ ಅಂಶಗಳನ್ನು ಜಾರಿಗೆ ತರುವುದು.

(1) ಪರೀಕ್ಷಾ ಅಧೀಕ್ಷಕರು ಮೊದಲು ವಿವರಣಾತ್ಮಕ ಹೇಳಿಕೆ ಅಥವಾ ವಿದ್ಯಾರ್ಥಿಗೆ ಸಂಬಂಧಪಟ್ಟ ವಿಚಾರಗಳನ್ನು ತಿಳಿಸಿ ಬರೆಯುವುದು.

(2) ವಿದ್ಯಾರ್ಥಿಯು ಅಂತಹ ಹೇಳಿಕೆಯನ್ನು ನೀಡಲು ತಯಾರಿಲ್ಲವೆಂಬ ಹೇಳಿಕೆಯನ್ನೇ ಬರೆಸಿಕೊಳ್ಳುವುದು. ಅದನ್ನು ಬರೆಯಲು ನಿರಾಕರಿಸಿದಲ್ಲಿ ಇಬ್ಬರು ಪರೀಕ್ಷಾ ಮೇಲ್ವಿಚಾರಕರನ್ನು ಸಾಕ್ಷಿ ಮಾಡಿ ಪಡೆದುಕೊಳ್ಳಬಹುದು, ಅದರಲ್ಲಿ ಒಬ್ಬರು ಉಪಪರೀಕ್ಷಾ ಅಧೀಕ್ಷಕರಾಗಿರಲೇಬೇಕು.

(3) ಅಧೀಕ್ಷಕರಿಂದ ಅಥವಾ ಚೆಕ್ಕಿಂಗ್ ಸ್ಕ್ವಾಡಿನ ಸದಸ್ಯರಿಂದ ಒಂದು ದೀರ್ಘ ಪ್ರಸ್ತಾವನೆಯನ್ನು ನಿರ್ದಿಷ್ಟ ರೀತಿಯಲ್ಲಿ ಪಡೆದು ಪರೀಕ್ಷಾ ಕುಲಸಚಿವರು ಹೇಳಿದ ರೀತಿಯಲ್ಲಿ ಮುಖ್ಯವಾದ ವಿಷಯಗಳನ್ನು ಸಂಗತಿಗಳನ್ನು ತಯಾರಿಸುವುದು.

(ಡಿ) ಯಾವಾಗ ವಿದ್ಯಾರ್ಥಿಯು ವಜಾಗೊಳ್ಳುತ್ತಾನೊ ಅದನ್ನು ಮುಖ್ಯ ಅಧೀಕ್ಷಕರು ತಾವು ವಜಾ ಅರ್ಜಿಯನ್ನು ತಯಾರಿಸಿದ ಆ ನಕಲನ್ನು ಸಂಬಂಧಪಟ್ಟ ವಿದ್ಯಾರ್ಥಿಗೆ ಕೊಟ್ಟು ಅವನಿಂದ ಸ್ವೀಕೃತಿಯನ್ನು ಪಡೆಯಬೇಕು. ವಿದ್ಯಾರ್ಥಿ ಏನಾದರು ಸ್ವೀಕೃತಿಗೆ ಲಭ್ಯವಾಗದಿದ್ದಲ್ಲಿ ವಜಾ ಅರ್ಜಿಯ ಹಿಂಭಾಗದಲ್ಲಿ ಸ್ವೀಕೃತಿಯನ್ನು ತಿರಸ್ಕರಿಸಿದ್ದನ್ನು ನಮೂದಿಸಬಹುದು.

(ಇ) ಹಾಗೆ ಮುಖ್ಯ ಅಧೀಕ್ಷಕರಿಂದ ವಜಾಗೊಂಡ ವಿದ್ಯಾರ್ಥಿಯು ಪರೀಕ್ಷಾ ಕೊಠಡಿಯಿಂದ ಹೊರಬಂದು ಅನಂತರ ಮುಂದಿನ ಯಾವುದೇ ಪರೀಕ್ಷೆಗಳನ್ನಾಗಲಿ ಬರೆಯಲು ಅಥವಾ ಪ್ರಾಯೋಗಿಕ ಅಥವಾ ಮೌಖಿಕ ಪರೀಕ್ಷೆಗಳನ್ನಾಗಲಿ, ಕುಲಪತಿಗಳು ವಜಾ ಅರ್ಜಿಯನ್ನು ಬದಲಾಯಿಸುವ ತನಕ ಅಥವಾ ವಜಾ ಮಾಡುವ ತನಕ ತೆಗೆದುಕೊಳ್ಳುವಂತಿಲ್ಲ.

(ಎಫ್) ವಿದ್ಯಾರ್ಥಿಯನ್ನು ವಜಾಗೊಳಿಸಿದ ಅನಂತರ, ಮುಖ್ಯ ಅಧೀಕ್ಷಕರು ಒಂದು ನಿರ್ದಿಷ್ಟವಾದ ಅರ್ಜಿ ನಮೂನೆಯಲ್ಲಿ ಸುದೀರ್ಘವಾದ ವರದಿಯನ್ನು ತಯಾರಿಸಿ ಉತ್ತರಪತ್ರಿಕೆಯೊಂದಿಗೆ ಅದನ್ನು ಪರೀಕ್ಷಾಂಗ

ಕುಲಸಚಿವರಿಗೆ ಕಳುಹಿಸತಕ್ಕದ್ದು. ಅದರ ಜೊತೆಯಲ್ಲಿ ಅಧೀಕ್ಷಕರ ವರದಿ, ಪರೀಕ್ಷಾ ದಿನಚರಿ, ಅದರ ವಿವರಣೆ ಹಾಗೂ ವಿದ್ಯಾರ್ಥಿಯ ಹೇಳಿಕೆ ಮುಂತಾದುವುಗಳನ್ನೂ ಸಹ ಪರೀಕ್ಷಾ ಕುಲಸಚಿವರಿಗೆ ಕೊಡತಕ್ಕದ್ದು.

## ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ/ವ್ಯಾಸಂಗ ಮಾಡುತ್ತಿರುವ ಮಹಿಳಿಯರಿಗೆ ಲೈಂಗಿಕ ದೌರ್ಜನ್ಯದ ವಿರುದ್ಧ ರಕ್ಷಣೆ

ಲೈಂಗಿಕ ದೌರ್ಜನ್ಯವು ಅತ್ಯಂತ ಸಾರ್ವತ್ರಿಕವಾಗಿದ್ದು, ಎಲ್ಲ ತರಹದ ಕಾರ್ಯಸ್ಥಳಗಳಲ್ಲೂ ಕಂಡುಬಂದಿರುವುದಾಗಿ ಅನೇಕ ಅಧ್ಯಯನಗಳು ದೃಢಪಡಿಸಿವೆ. ಮಹಿಳೆಯ ಮೇಲೆ ಪುರುಷನ ಪ್ರಾಬಲ್ಯವನ್ನು ತೋರಿಸುವ, ಅವಳ ಅಸಹಾಯಕತೆಯನ್ನು ಮತ್ತು ಕೆಳದರ್ಜೆಯ ಸ್ಥಾನಮಾನಗಳನ್ನು ನೆನಪಿಸುವ ಸಾಧನ ಇದಾಗಿದೆ. ಲೈಂಗಿಕ ದೌರ್ಜನ್ಯ ಅಸಂಖ್ಯಾತ ಮಹಿಳೆಯರ ಜೀವನವನ್ನು ದುರ್ಬಲಗೊಳಿಸಿದೆ. ಆದಾಗ್ಯೂ ಹಲವು ಸಾರಿ ಇದು ಬೆಳಕಿಗೆ ಬರದೇ ಅವಳು ಮೌನವಾಗಿ ಅನುಭವಿಸುವಂತೆ ಮಾಡುತ್ತಾರೆ.

ಒಬ್ಬಳು ಮಹಿಳೆ ತನ್ನ ಕಾರ್ಯಕ್ಷೇತ್ರದಲ್ಲಿ ಅವಳು ಹೆಂಗಸು ಎಂಬ ಒಂದೇ ಕಾರಣದಿಂದಾಗಿ ಪೀಡನೆ ಅನುಭವಿಸುತ್ತಿದ್ದರೆ ಅದು ಲೈಂಗಿಕ ಕಿರುಕುಳ ಎಂದೆನಿಸಿಕೊಳ್ಳುತ್ತದೆ. ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರು, ಮಹಿಳಾ ಸಿಬ್ಬಂದಿ ಮುಂತಾದವರು ಈ ಕಿರುಕುಳಕ್ಕೆ ಒಳಗಾಗುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ 1997ರ ಆಗಸ್ಟ್ 13ರಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಲೈಂಗಿಕ ಕಿರುಕುಳದ ಬಗ್ಗೆ ಒಂದು ಮಹತ್ತರವಾದ ತೀರ್ಪನ್ನು ನೀಡಿ ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕೆಲವೊಂದು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಕೊಟ್ಟಿದೆ.

**ಮಹಿಳಾ ದೌರ್ಜನ್ಯ ಸಂಬಂಧಿತ ಮಹಿಳೆಯರ ಹಕ್ಕುಗಳು :**

- ಉದ್ಯೋಗ ಮತ್ತು ವ್ಯಾಸಂಗ ಸ್ಥಳದಲ್ಲಿ ಸುರಕ್ಷಿತ, ನಿರ್ಭಯ ಹಾಗೂ ಮುಕ್ತ ವಾತಾವರಣವನ್ನು ಬಯಸುವುದು.
- ಮೇಲ್ಕಂಡ ಪರಿಸರವನ್ನು ಒದಗಿಸುವಂತೆ ಸಂಬಂಧಪಟ್ಟವರನ್ನು ಒತ್ತಾಯಿಸುವುದು.
- ವಿಚಾರಣೆಗೆ ಮುಂಚೆಯೇ ಕಿರುಕುಳ ನೀಡಿದವರನ್ನು ಅಥವಾ ತನ್ನನ್ನು ವರ್ಗಾಯಿಸುವಂತೆ ಕೇಳುವುದು.
- ವ್ಯಾಸಂಗ, ಉದ್ಯೋಗ ಮಾಡುವ ಪರಿಸರದಲ್ಲಿ ಸಮಾನತೆ ಮತ್ತು ಘನತೆಯನ್ನು ಬಯಸುವುದು.

**ಲೈಂಗಿಕ ದೌರ್ಜನ್ಯ ಎಂದರೇನು?**

- ದೈಹಿಕ ಸಂಪರ್ಕ ಅಥವಾ ಅದಕ್ಕಾಗಿ ಪ್ರಯತ್ನಿಸುವುದು.
- ದೈಹಿಕ ಸಂಪರ್ಕಕ್ಕಾಗಿ ಒತ್ತಾಯಿಸುವುದು ಅಥವಾ ಬೇಡಿಕೆ ಸಲ್ಲಿಸುವುದು.
- ಲೈಂಗಿಕ ಕುಚೋದ್ಯ ಅಥವಾ ಕುಹಕದ ಮಾತುಗಳನ್ನಾಡುವುದು.
- ಅಶ್ಲೀಲ ಸಾಹಿತ್ಯ ಅಥವಾ ಚಿತ್ರ ತೋರಿಸುವುದು.
- ಲೈಂಗಿಕ ಸ್ವರೂಪದ ಇತರೆ ಯಾವುದೇ ಅನುಚಿತ ಅಂಗಚೇಷ್ಟೆ ಅಥವಾ ಸನ್ನೆ ಮಾಡುವುದು.

**ಯಾವ ಸಂದರ್ಭಗಳಲ್ಲಿ ದೂರು ನೀಡಬೇಕು?**

- ಯಾವೊಬ್ಬ ಪುರುಷನು ಸಾಕಷ್ಟು ಸ್ಥಳಾವಕಾಶವಿದ್ದರೂ ಸಹ ನಿಮಗೆ ಮುಜುಗರವೆನಿಸುವಷ್ಟು ಸಮೀಪದಲ್ಲಿ ನಿಂತಾಗ
- ಯಾವೊಬ್ಬ ಪುರುಷನು ಸಂಕೋಚವಾಗುವಷ್ಟು ನಿಮ್ಮನ್ನು ಎವೆಯಿಕ್ಕದೇ ದಿಟ್ಟಿಸಿ ನೋಡಿದಾಗ/ನಿಮ್ಮನ್ನು

ಹಿಂಬಾಲಿಸಿದಾಗ

- ಕೆಲಸ ಆಗಬೇಕಾದರೆ ತನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಸೂಚಿಸಿದಾಗ
- ಅವೇಳೆಯಲ್ಲಿ ಒಂಟಿಯಾಗಿ ತನ್ನನ್ನು ಬಂದು ಕಾಣಲು ಸೂಚಿಸಿದಾಗ
- ಅಶ್ಲೀಲ ಹಾಸ್ಯ ಚಟಾಕಿಗಳನ್ನು ಹಾರಿಸುವುದರ ಮೂಲಕ ಇತರರೆದುರಿಗೆ ಸಂಕೋಚ ಪಡುವಂತೆ ಮಾಡಿದಾಗ
- ಚುಡಾಯಿಸಿದಾಗ, ದ್ವಂದ್ವಾರ್ಥವಿರುವ ಮಾತುಗಳನ್ನಾಡಿದಾಗ. ಇವಷ್ಟೇ ಅಲ್ಲದೇ, ಹೆಣ್ಣೆಂಬ ಕಾರಣದಿಂದಲೇ ಭಯ, ತಾರತಮ್ಯ, ಮುಜುಗರ ಮುಂತಾದವುಗಳನ್ನು ಅನುಭವಿಸಬೇಕಾಗಿ ಬಂದಾಗ

**ಯಾರಿಗೆ ದೂರು ನೀಡಬೇಕು?**

ಕಾರ್ಯಕ್ಷೇತ್ರದಲ್ಲಿನ ದೂರು ಸಮಿತಿಗೆ/ ಪ್ರಾಂಶುಪಾಲರು ಅಥವಾ ನಿರ್ದೇಶಕರು ಅಥವಾ ಪ್ರಬಂಧಕರು ಇತ್ಯಾದಿ ಉನ್ನತ ಅಧಿಕಾರಿಗೆ/ ವಿಶ್ವವಿದ್ಯಾನಿಲಯದ ಕುಲಪತಿ ಅಥವಾ ಕುಲಸಚಿವರಿಗೆ/ ಮೈಸೂರು ವಿಶ್ವವಿದ್ಯಾನಿಲಯದ ಲೈಂಗಿಕ ದೌರ್ಜನ್ಯ ದೂರುಗಳ ಸಮಿತಿಯ ಅಧ್ಯಕ್ಷರಿಗೆ/ಕಾರ್ಯದರ್ಶಿಗೆ/ಸದಸ್ಯರಿಗೆ

**ದೂರು ನೀಡುವ ಉದ್ದೇಶ ಮತ್ತು ಕ್ರಮ**

ಮಹಿಳೆ ತಾನು ಕೆಲಸ ಮಾಡುವ/ಅಧ್ಯಯನ ಮಾಡುವ ಸ್ಥಳದಲ್ಲಿ ಗೌರವಯುತವಾಗಿ ಇರಬೇಕು ಎಂಬುದು ಇದರ ಉದ್ದೇಶ. ಕೆಳಗಿನ ನಮೂನೆಯಲ್ಲಿ ದೂರನ್ನು ನೀಡಬೇಕು.

- ದೂರು ನೀಡುವವರ ಹೆಸರು
- ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ
- ಆರೋಪಿಯ ಹೆಸರು, ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ
- ದೂರಿನ ವಿವರ
- ದೂರು ನೀಡುವವರ ಸಹಿ ಮತ್ತು ದಿನಾಂಕ

**ವಿಚಾರಣಾ ಕ್ರಮ :**

- ದೂರಿನ ಬಗ್ಗೆ ಮತ್ತು ದೂರು ನೀಡಿದವರ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಲಾಗುವುದು
- ದೂರು ನೀಡಿದವರನ್ನು ಘನತೆ, ಗೌರವಗಳಿಂದ ನಡೆಸಿಕೊಳ್ಳಲಾಗುವುದು
- ವಿಚಾರಣಾ ಪ್ರಕ್ರಿಯೆ ಮಾನವೀಯತೆಯಿಂದ ಕೂಡಿರುವುದು.
- ನಿರ್ಭಯವಾಗಿ, ಮುಕ್ತವಾಗಿ ದೂರನ್ನು ಮಂಡಿಸುವ ಅವಕಾಶ ನೀಡಲಾಗುವುದು.

**೨. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ರ್‍ಯಾಗಿಂಗ್ ವಿರುದ್ಧ ರಕ್ಷಣೆಗಾಗಿ ಯು.ಜಿ.ಸಿ. ೨೦೦೯ರ ನಿಯಮಾವಳಿಗಳು:**

ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿಗಳ ನಡುವಳಿಕೆಗಳನ್ನು ನಿರ್ಬಂಧಿಸುವಲ್ಲಿ; ಶಬ್ದಪ್ರಯೋಗ ಅಥವಾ ಬರೆವಣಿಗೆ ಅಥವಾ ಬೇರೆ ಇನ್ನಾವುದೇ ಚುಡಾಯಿಸುವಿಕೆಯ ಪ್ರಭಾವ ಬೀರುವ ವರ್ತನೆಗಳು ಕಂಡುಬಂದಲ್ಲಿ; ಹೊಸದಾಗಿ ಪ್ರವೇಶಾತಿ ಪಡೆದ ಅಥವಾ ಬೇರೆ ಇನ್ನಾವುದೇ ವಿದ್ಯಾರ್ಥಿಗೆ/ವಿದ್ಯಾರ್ಥಿಗಳಲ್ಲಿ ಪುಂಡಾಟಿಕೆ ಅಥವಾ ಅಶಿಸ್ತಿನ ವರ್ತನೆಗಳಲ್ಲಿ ತೊಡಗಿದ್ದಲ್ಲಿ; ವಿದ್ಯಾರ್ಥಿಗಳಿಗೆ ಕಿರಿಕಿರಿ ಉಂಟು ಮಾಡುವ ಕಾರಣಗಳು ಕಂಡುಬಂದಲ್ಲಿ; ತೊಂದರೆ ಅಥವಾ ಮಾನಸಿಕ ಯಾತನೆ ಅಥವಾ ಭಯ ಹುಟ್ಟಿಸುವಿಕೆ ಅಥವಾ ಆತಂಕ ಹುಟ್ಟಿಸುವಿಕೆ ಕಂಡುಬಂದಲ್ಲಿ;

ಯಾವುದೇ ವಿದ್ಯಾರ್ಥಿ ಬೇರೊಬ್ಬ ವಿದ್ಯಾರ್ಥಿಯನ್ನು ಅಶಿಸ್ತಿನಿಂದ ವರ್ತಿಸುವಂತೆ ಪ್ರೇರೇಪಿಸಿದ್ದಲ್ಲಿ ಅಥವಾ ಆತನಿಗೆ ಇಷ್ಟವಿಲ್ಲದ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸಿದ್ದಲ್ಲಿ; ಆ ಚಟುವಟಿಕೆಗಳು ಆತನಲ್ಲಿ ನಾಚಿಕೆ ಹುಟ್ಟಿಸುವಂತಹ ಭಾವನೆಗಳು ಕಂಡುಬಂದಲ್ಲಿ ಅಥವಾ ಚಿತ್ರಹಿಂಸೆ ಕೊಡುವ ವರ್ತನೆ ಅಥವಾ ಸಂಕೋಚಗೊಳ್ಳುವಂತೆ ಮಾಡುವುದು ಕಂಡುಬಂದಲ್ಲಿ; ಹೊಸದಾಗಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಅಥವಾ ಬೇರೆ ಯಾವುದೇ ವಿದ್ಯಾರ್ಥಿಗಳಲ್ಲಿ ಶಾರೀರಿಕ ಹಾಗೂ ಮಾನಸಿಕ ಪ್ರತಿಕೂಲ ಪ್ರಭಾವಗಳನ್ನುಂಟು ಮಾಡಿದಲ್ಲಿ; ಉದ್ದೇಶಿತ ಅಥವಾ ಉದ್ದೇಶರಹಿತ ಹಿಂಸಾಸಕ್ತ ಸಂತೋಷವನ್ನು ಪಡೆದುಕೊಳ್ಳುವುದು ಅಥವಾ ತನ್ನ ಬಲವನ್ನು ಪ್ರದರ್ಶಿಸುವುದು ಕಂಡುಬಂದಲ್ಲಿ; ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಯೊಡನೆ ಅಥವಾ ಇನ್ನಿತರ ಯಾವುದೇ ವಿದ್ಯಾರ್ಥಿಯೊಡನೆ ಅಧಿಕಾರಯುತವಾಗಿ ಹಾಗೂ ಮೇಲರಿಮೆ ಪ್ರದರ್ಶಿಸಿದಲ್ಲಿ – ಈ ನಡುವಳಿಕೆಯಿಂದ ರ್‍ಯಾಗಿಂಗ್‌ನ್ನು ತೊಡೆದು ಹಾಕುವ/ನಿಯಂತ್ರಿಸುವ ಎಲ್ಲ ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯಗಳು, ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಹಾಗೂ ದೇಶದ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೆಳಕಂಡ ನಿಬಂಧನೆಗಳನ್ನು ಬಳಸಿಕೊಂಡು ರ್‍ಯಾಗಿಂಗ್ ಮರುಕಳಿಸದಂತೆ ವಿದ್ಯಾರ್ಥಿಗಳನ್ನು ಶಿಕ್ಷಿಸಲು ಕೆಳಕಂಡ ನಿಬಂಧನೆಗಳಿಗೆ ಸಂಬಂಧಪಟ್ಟಂತಹ ನಿರ್ದಿಷ್ಟ ಕಾಯಿದೆ ಕಾನೂನುಗಳನ್ನು ಜಾರಿಗೆ ತರುವುದು.

**ರ್‍ಯಾಗಿಂಗ್ ಯಾವ ಅಂಶಗಳನ್ನು ಒಳಗೊಂಡಿರುತ್ತದೆ :**

ರ್‍ಯಾಗಿಂಗ್ ಕೆಳಕಂಡ ಒಂದು ಅಥವಾ ಅದಕ್ಕಿಂತ ಹೆಚ್ಚಿನ ವರ್ತನೆಗಳು/ನಡವಳಿಕೆಗಳನ್ನು ಒಳಗೊಂಡಿರುತ್ತದೆ.

(ಅ) ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿ ಅಥವಾ ಇನ್ನಿತರ ಯಾವುದೇ ವಿದ್ಯಾರ್ಥಿಗಳ ನಡವಳಿಕೆಗಳಲ್ಲಿ ಕಂಡುಬರುವ ಮಾತಿನ ಚಕಮಕಿ ಅಥವಾ ಬರವಣಿಗೆ ಅಥವಾ ಒರಟುತನ ಪ್ರದರ್ಶಿಸುವ ಅಥವಾ ಚುಡಾಯಿಸುವ ಅಥವಾ ಕೆಟ್ಟದಾಗಿ ನಡೆಸಿಕೊಳ್ಳುವಂತಹ ಪರಿಣಾಮ ಬೀರುವ ವರ್ತನೆಗಳು;

(ಆ) ಹೊಸದಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿ ಅಥವಾ ಇನ್ನಿತರ ಯಾವುದೇ ವಿದ್ಯಾರ್ಥಿ ಪುಂಡಾಟಿಕೆಯಲ್ಲಿ ತೊಡಗುವ/ಅಶಿಸ್ತಿನ ಚಟುವಟಿಕೆಗಳು; ಯಾವುದೇ ಬೇರೆ ವಿದ್ಯಾರ್ಥಿಗಳಲ್ಲಿ ಮಾನಸಿಕ ಹಾಗೂ ಶಾರೀರಿಕ ಹಿಂಸೆ, ತೊಂದರೆ, ಕಷ್ಟ, ಅಳುಕು ಅಥವಾ ಆತಂಕ ಹುಟ್ಟಿಸುವುದು;

(ಇ) ಹೊಸದಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿ ಅಥವಾ ಇನ್ನಿತರ ಯಾವುದೇ ವಿದ್ಯಾರ್ಥಿಯ ಶಾರೀರಿಕ ಅಥವಾ ಮಾನಸಿಕ ನಡುವಳಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಅಂದರೆ ವಿದ್ಯಾರ್ಥಿಯ ಇಚ್ಛೆಗೆ ವಿರುದ್ಧವಾದ ಕಾರ್ಯದಲ್ಲಿ ಪ್ರೇರೇಪಿಸುವುದು ಹಾಗೂ ಅವಮಾನವನ್ನುಂಟು ಮಾಡುವ ಅಥವಾ ಚಿತ್ರಹಿಂಸೆ ಅಥವಾ ಮುಜುಗರಪಡಿಸುವ ವರ್ತನೆ;

(ಈ) ಒಬ್ಬ ವ್ಯಕ್ತಿಯ ಅಥವಾ ವಿದ್ಯಾರ್ಥಿ ಸಮೂಹದ ಹಿರಿಯ ವಿದ್ಯಾರ್ಥಿಗಳ ನಡುವಳಿಕೆಯಲ್ಲಿ, ನಿರಂತರವಾದ ಶೈಕ್ಷಣಿಕ ಚಟುವಟಿಕೆಗಳು ಜರುಗುತ್ತಿದ್ದಾಗ ಹಿರಿಯ ವಿದ್ಯಾರ್ಥಿಯು ಅದನ್ನು ಅಡ್ಡಿಪಡಿಸುವ ಅಥವಾ ಅದನ್ನು ತಡೆಗಟ್ಟುವ ಅಥವಾ ತೊಂದರೆಪಡಿಸುವ ವರ್ತನೆಗಳು;

(ಉ) ಯಾವುದೇ ವಿದ್ಯಾರ್ಥಿಯ ಅಥವಾ ಹೊಸದಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿಯ ಶೈಕ್ಷಣಿಕ ಚಟುವಟಿಕೆಗಳನ್ನು ಪೂರ್ಣಗೊಳಿಸುವಲ್ಲಿ, ಬೇರೆ ಯಾವುದೇ ವಿದ್ಯಾರ್ಥಿ ಅಥವಾ ಹೊಸದಾಗಿ ಸೇರಿದ ವಿದ್ಯಾರ್ಥಿಯು ಶೈಕ್ಷಣಿಕ ಸೇವೆಗಳನ್ನು ಶೋಷಣೆ ಮಾಡುವುದು;

(ಊ) ಹೊಸದಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿ ಅಥವಾ ಇನ್ನಿತರ ಯಾವುದೇ ವಿದ್ಯಾರ್ಥಿಗಳ ಮೇಲೆ ಬೇರೊಬ್ಬ ವಿದ್ಯಾರ್ಥಿಯು ಹಣಕಾಸಿನ ಸುಲಿಗೆ ಅಥವಾ ಒತ್ತಾಯಪೂರ್ವಕವಾದ

ವೆಚ್ಚದ ಹೊರೆಯನ್ನು ಹೊರಿಸುವುದು;

(ಋ) ಶಾರೀರಿಕ ನಿಂದನೆಗಳನ್ನೊಳಗೊಂಡ ವರ್ತನೆಗಳು ಅಂದರೆ:– ಲೈಂಗಿಕ ನಿಂದನೆ, ಸಲಿಂಗರತಿ ಚಟುವಟಿಕೆಯ ಹಲ್ಲೆ, ವಿವಸ್ತ್ರಗೊಳಿಸುವಿಕೆ, ನೀಚ ಚಟುವಟಿಕೆಗಳು ಮತ್ತು ಅಶ್ಲೀಲತೆಯಲ್ಲಿ ತೊಡುಗುವಂತೆ ಪ್ರಚೋದಿಸುವುದು, ನೀಚ ಚಟುವಟಿಕೆಗಳಲ್ಲಿ ತೊಡಗುವುದು, ನೀಚ ಹಾವಭಾವಗಳನ್ನು ಪ್ರದರ್ಶಿಸುವುದು, ಶಾರೀರಿಕ ತೊಂದರೆಗಳನ್ನುಂಟು ಮಾಡುವುದು, ಅಥವಾ ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಿಸಿದ ಯಾವುದೇ ಅಪಾಯಗಳನ್ನು ಸೃಷ್ಟಿಸುವುದು;

(ೠ) ಹೊಸದಾಗಿ ಪ್ರವೇಶ ಪಡೆದ ಅಥವಾ ಯಾವುದೇ ವಿದ್ಯಾರ್ಥಿಯು ಉಂಟು ಮಾಡುವ ಯಾವುದೇ ನಡವಳಿಕೆ, ಮಾತಿನ ಬಳಕೆಯಲ್ಲಿ ನಿಂದನೆ, ವಿದ್ಯುನ್ಮಾನ ತಂತಿಯ ಸಂದೇಶಗಳು, ಟಪಾಲು, ಸಾರ್ವಜನಿಕ ನಿಂದನೆ, ಅದರಲ್ಲಿ ಪ್ರಮುಖವಾಗಿ ನಿರ್ಬಂಧಿತ ಸುಖವನ್ನು ಪಡೆಯುವ ಪರಾನುಭಾವ ಸಂತೋಷ ಅಥವಾ ಪೀಡಾನುಸುಖದಲ್ಲಿನ ವೀರೇಳುವ ಕ್ರಿಯಾಶೀಲ ಅಥವಾ ಕ್ರಿಯಾರಹಿತ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಬೇರೆ ವಿದ್ಯಾರ್ಥಿಗೆ ಅಡ್ಡಿಯನ್ನುಂಟು ಮಾಡುವುದು;

(ಎ) ಹೊಸದಾಗಿ ಪ್ರವೇಶಾತಿ ಪಡೆದ ಅಥವಾ ಯಾವುದೇ ವಿದ್ಯಾರ್ಥಿಯ ಆತ್ಮವಿಶ್ವಾಸ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಹದಗೆಡಿಸುವ ಚಟುವಟಿಕಗಳು;

(ಏ) ಹೊಸದಾಗಿ ಪ್ರವೇಶಾತಿ ಪಡೆದ ಅಥವಾ ಯಾವುದೇ ವಿದ್ಯಾರ್ಥಿಯು ಉದ್ದೇಶಪೂರ್ವಕ ಅಥವಾ ಉದ್ದೇಶರಹಿತವಾಗಿ ಹಿಂಸಾಸಕ್ತ ಆನಂದವನ್ನು ಅನುಭವಿಸುವುದು ಅಥವಾ ತನ್ನ ಶಕ್ತಿಯನ್ನು ಪ್ರದರ್ಶಿಸುವುದು; ಅಧಿಕಾರಯುತ ಅಥವಾ ಶ್ರೇಷ್ಠಭಾವನೆಯನ್ನು ಪ್ರದರ್ಶಿಸಲು ಇಚ್ಛಿಸುವುದು;

(ಐ) ಹೊಸದಾಗಿ ಪ್ರವೇಶಾತಿ ಪಡೆದ ಅಥವಾ ಯಾವುದೇ ವಿದ್ಯಾರ್ಥಿಯಮಾನಸಿಕ ಆರೋಗ್ಯವನ್ನು ಮತ್ತು ಆತ್ಮವಿಶ್ವಾಸವನ್ನು ನಾಶಮಾಡುವ ಯಾವುದೇ ಚಟುವಟಿಕೆ;

## ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್‌ನ್ನು ತಡೆಗಟ್ಟುವ ಕ್ರಮಗಳು

ಶೈಕ್ಷಣಿಕ ಸಂಸ್ಥೆಯ ಒಳಗೆ ಅಥವಾ ಹೊರಗೆ ರ್‍ಯಾಗಿಂಗ್‌ಅನ್ನು ನಿವಾರಿಸಲು ಕೆಳಕಂಡ ನಿಬಂಧನೆಗಳನ್ನು ವಿಧಿಸಲಾಗಿದೆ –

(ಅ) ಯಾವುದೇ ಸಂಸ್ಥೆಯಾಗಲಿ ಅಥವಾ ಅದರ ಯಾವುದೇ ಭಾಗವಾಗಲಿ ಅದರಲ್ಲೂ ಮುಖ್ಯವಾಗಿ ಅದರ ಮೂಲಾಂಶಗಳು ಮಿತಿಯಿಲ್ಲದಿರುವ ಅಂದರೆ ವಿಭಾಗಗಳು, ಅಂಗಸಂಸ್ಥೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು,ಅಧ್ಯಯನ ಕೇಂದ್ರಗಳು ಮತ್ತು ಅದರ ಸಂಪೂರ್ಣ ಆವರಣಗಳಲ್ಲಿ ಜೊತೆಗೆ ಶೈಕ್ಷಣಿಕ, ವಾಸಕ್ಕೆ ಯೋಗ್ಯವಾದ ಸ್ಥಳ, ಆಟದ ಮೈದಾನಗಳು ಅಥವಾ ಉಪಾಹಾರಗೃಹ ಇವುಗಳೆಲ್ಲವೂ ಆವರಣದ ಒಳಗೆ ಅಥವಾ ಹೊರಗಿರಲಿ ಮತ್ತು ಎಲ್ಲಾ ಬಗೆಯ ವಿದ್ಯಾರ್ಥಿಗಳು ಬಳಸುವ ಸಾರಿಗೆ ಸೌಕರ್ಯಗಳು ಅದು ಸಾರ್ವಜನಿಕ ಅಥವಾ ಖಾಸಗಿಯಾಗಿರಲಿ, ಅಂತಹ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣವನ್ನು ಮುಂದುವರೆಸುತ್ತಿರುವ ವಿದ್ಯಾರ್ಥಿಗಳು ಯಾವುದೇ ರೀತಿಯ ರ್‍ಯಾಗಿಂಗ್ ಅಂಶಗಳು ಕಂಡುಬಂದಲ್ಲಿ ಅದನ್ನು ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿ ಒದಗಿಸಿ ಮತ್ತು ಎಲ್ಲಾ ಶಿಕ್ಷಣ ಸಂಸ್ಥೆಗಳು ಅವಶ್ಯಕವಾದ ಹಾಗೂ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(ಆ) ರ್‍ಯಾಗಿಂಗ್‌ಅನ್ನು ಪ್ರೇರೇಪಿಸುವ ಮತ್ತು ಕುಮ್ಮಕ್ಕು ನೀಡುವ ಅಥವಾ ಕ್ರಿಯಾಶೀಲ ಅಥವಾ ಕ್ರಿಯಾರಹಿತವಾಗಿ

ರ್‍ಯಾಗಿಂಗ್‌ನ ಒಳಸಂಚು ಮಾಡಿದ್ದಲ್ಲಿ ಈ ಪ್ರಕಾರ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಅಗತ್ಯ ಕ್ರಮಗಳನ್ನು ರ್‍ಯಾಗಿಂಗ್ ನಡೆಸುವವರ ವಿರುದ್ಧ ಕ್ರಮಕೈಗೊಳ್ಳುವುದು.

**ರ್‍ಯಾಗಿಂಗ್ ಘಟನೆಗಳಿಗೆ ಸಂಭವಿಸಿದಂತೆ ಆಡಳಿತಾತ್ಮಕ ಕ್ರಮಗಳು**

ವಿದ್ಯಾರ್ಥಿಯು ರ್‍ಯಾಗಿಂಗ್‌ನ ಒಳಸಂಚಿನಲ್ಲಿ ತೊಡಗಿದ್ದರೆ ಈ ಕೆಳಕಂಡ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬಹುದು –

(ಎ) ರ್‍ಯಾಗಿಂಗ್ ನಿರ್ಬಂಧ ತಂಡವು ರ್‍ಯಾಗಿಂಗ್‌ನ ಸ್ವರೂಪ ಹಾಗೂ ಪ್ರಾಧಾನ್ಯತೆಯ ಅನುಸಾರವಾಗಿ ರ್‍ಯಾಗಿಂಗ್ ನಿರ್ಬಂಧ ಸಮಿತಿಯು ತಪ್ಪಿತಸ್ಥರನ್ನು ಕೆಳಕಂಡ ಶಿಕ್ಷೆಗಳಿಗೆ ಗುರಿಪಡಿಸಬಹುದು.

(ಬಿ) ರ್‍ಯಾಗಿಂಗ್ ನಿರ್ಬಂಧ ತಂಡವು, ತಪ್ಪಿತಸ್ಥರನ್ನು, ರ್‍ಯಾಗಿಂಗ್ ನಿರ್ಬಂಧ ಸಮಿತಿಯು ನಿರ್ಧರಿಸಿದ ಅಪರಾಧಗಳ ಸ್ವರೂಪದ ಆಧಾರದ ಮೇಲೆ ಕೆಳಕಂಡ 1 ಅಥವಾ ಹೆಚ್ಚಿನ ಶಿಕ್ಷೆಗೆ ಗುರಿಪಡಿಸಬಹುದು.

1. ಶೈಕ್ಷಣಿಕ ಸೌಲಭ್ಯಗಳಿಂದ ಮತ್ತು ತರಗತಿಗೆ ಹಾಜರಾಗುವ ಸೌಲಭ್ಯದಿಂದ ಉಚ್ಚಾಟಿಸಲಾಗುವುದು.
2. ವಿದ್ಯಾರ್ಥಿವೇತನ ಅಥವಾ ಗೌರವಧನಗಳನ್ನು ಹಿಂಪಡೆದುಕೊಳ್ಳುವುದು ಅಥವಾ ತಡೆಹಿಡಿಯುವುದು.
3. ಯಾವುದೇ ಬಗೆಯ ಪರೀಕ್ಷೆ ಅಥವಾ ಕಿರುಪರೀಕ್ಷೆಗೆ ಕೂರದಂತೆ ಅಥವಾ ಇನ್ನಿತರ ಮೌಲ್ಯಮಾಪನ ಪ್ರಕ್ರಿಯೆಗಳಿಂದ ವಜಾಗೊಳಿಸಲಾಗುವುದು.
4. ಫಲಿತಾಂಶವನ್ನು ತಡೆಹಿಡಿಯಲಾಗುವುದು.
5. ಸಂಸ್ಥೆಯನ್ನು ಪ್ರತಿನಿಧಿಸುವ ಯಾವುದೇ ಪ್ರಾಂತೀಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಕೂಟಗಳಲ್ಲಿ, ಸ್ಪರ್ಧೆಗಳಲ್ಲಿ, ಯುವಜನೋತ್ಸವಗಳಲ್ಲಿ ಪ್ರತಿನಿಧಿಸದಂತೆ ವಜಾಗೊಳಿಸಲಾಗುವುದು.
6. ವಸತಿನಿಲಯಗಳಿಂದ ಹೊರಹಾಕುವುದು ಅಥವಾ ವಜಾಗೊಳಿಸುವುದು.
7. ಪ್ರವೇಶಾತಿಯನ್ನು ರದ್ದುಗೊಳಿಸುವುದು.
8. ಶೈಕ್ಷಣಿಕ ಸಂಸ್ಥೆಯಿಂದ ಹೊರಹಾಕುವುದು ಮತ್ತು ನಿರ್ದಿಷ್ಟ ಸಮಯದವರೆಗೆ ಬೇರೆ ಸಂಸ್ಥೆಗಳಿಂದಲೂ ಪ್ರವೇಶಾತಿಯಿಂದ ವಜಾಗೊಳಿಸುವುದು. ಆದರೆ ವ್ಯಕ್ತಿಯು ರ್‍ಯಾಗಿಂಗ್ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುವುದು ಪತ್ತೆಯಾಗದಿದ್ದಲ್ಲಿ, ಸಂಸ್ಥೆಗಳು ಸಾಮೂಹಿಕ ಶಿಕ್ಷೆಯನ್ನು ಅನುಸರಿಸುವುದು.

## ಮೈಸೂರು ವಿಶ್ವವಿದ್ಯಾನಿಲಯ
## ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಗೌರವಾನ್ವಿತರು

| ಕ.ಸಂ. | ಹೆಸರು | ಇಸವಿ |
|---|---|---|
| 01. | ಡಾ. ಸಿ. ಆರ್. ರೆಡ್ಡಿ | 1916-1917 |
| 02. | ಪ್ರೊ. ಎನ್. ಎಸ್. ಸುಬ್ಬರಾವ್ | 1917-1928 |
| 03. | ಪ್ರೊ. ಜೆ. ಸಿ. ರೋಲೊ | 1928-1943 |
| 04. | ಪ್ರೊ. ಎ. ಬಿ. ಮೆಕಿನ್‌ತೋಷ್ | 1943-1944 |
| 05. | ಡಾ. ಎಂ. ವಿ. ಗೋಪಾಲಸ್ವಾಮಿ | 1944-1952 |
| 06. | ಪ್ರೊ. ಎಸ್. ವಿ. ರಂಗಣ್ಣ | 1952-1953 |
| 07. | ಪ್ರೊ. ವಿ. ಎಲ್. ಡಿಸೋಜ | 1953-1954 |
| 08. | ಡಾ. ಟಿ. ಎ. ಪುರುಷೋತ್ತಮ್ | 1954-1955 |
| 09. | ಡಾ. ಕೆ. ವಿ. ಪುಟ್ಟಪ್ಪ | 1955-1956 |
| 10. | ಪ್ರೊ. ಸಿ. ಡಿ. ನರಸಿಂಹಯ್ಯ | 1956-1962 |
| 11. | ಡಾ. ಕೈಜರ್ ಆಲಿಖಾನ್ | 1962-1966 |
| 12. | ಪ್ರೊ. ಎಸ್. ಎನ್. ಶಾಂತವೀರಪ್ಪ | 1966-1968 |
| 13. | ಡಾ. ಕೆ. ಬಿ. ವೈ. ತೋಟಪ್ಪ | 1968-1970 |
| 14. | ಡಾ. ಗೌಸ್‌ಖಾನ್‌ಗೋರಿ | 1970-1972 |
| 15. | ಪ್ರೊ. ಎನ್. ಶಂಕರಲಿಂಗಯ್ಯ | 1972-1985 |
| 16. | ಪ್ರೊ. ಎಲ್. ಎನ್. ಪವಾರ್ | 1985-1987 |
| 17. | ಪ್ರೊ. ಎಂ. ಶಿವಲಿಂಗಯ್ಯ | 1987-1995 |
| 18. | ಡಾ. ಎಸ್. ಗುರುರಾಜಚಾರ್ | 1995-1995 |
| 19. | ಡಾ. ಎಂ. ಬಿ. ಪದ್ಮ | 1995-2003 |
| 20. | ಪ್ರೊ. ಎಸ್. ಸಿದ್ದರಾಜು | 2003-2006 |
| 21. | ಪ್ರೊ. ಸಿ. ಸರ್ವಮಂಗಳಾ ಬಾಯಿ | 2006-2008 |
| 22. | ಪ್ರೊ. ಕೆ. ಗಾಯತ್ರಿ | 2008-2008 |
| 23. | ಪ್ರೊ. ಹೆಚ್. ಎಸ್. ನಾರಾಯಣ ಶೆಟ್ಟಿ | 2008-2008 |
| 24. | ಪ್ರೊ. ಎಸ್. ಎನ್. ಗಾಯತ್ರಿ | 2008-2011 |
| 25. | ಡಾ. ಸಿ. ಬಿ. ರಾಮಚಂದ್ರ | 2011-2013 |
| 26. | ಪ್ರೊ. ಎಸ್. ಎನ್. ಗಾಯತ್ರಿ | 2013–2014 |
| 27. | ಪ್ರೊ. ಬಿ. ನಾಗರಾಜ ಮೂರ್ತಿ | 2014- |

## ಬೋಧಕರ ವರ್ಗ

### ೧ ಕನ್ನಡ ವಿಭಾಗ

| | | |
|---|---|---|
| ಡಾ॥ ವಿಶ್ವನಾಥ್ | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| ಡಾ॥ ವಿಜಯಲಕ್ಷ್ಮಿ | | ಸಹ ಪ್ರಾಧ್ಯಾಪಕರು |
| ಡಾ॥ ಕೆ. ತಿಮ್ಮಯ್ಯ | | ಸಹ ಪ್ರಾಧ್ಯಾಪಕರು |
| ಡಾ॥ ಸೌಭಾಗ್ಯವತಿ ಕೆ | | ಸಹಾಯಕ ಪ್ರಾಧ್ಯಾಪಕರು |
| ಡಾ॥ ಬಿ. ಪಿ. ಆಶಾಕುಮಾರಿ | | ಸಹಾಯಕ ಪ್ರಾಧ್ಯಾಪಕರು |
| ಡಾ॥ ಷಹಸೀನಾಬೇಗಂ | | ಸಹಾಯಕ ಪ್ರಾಧ್ಯಾಪಕರು |
| ಡಾ॥ ಎಂ. ಬಿ. ಸುರೇಶ | | ಸಹಾಯಕ ಪ್ರಾಧ್ಯಾಪಕರು |
| ಡಾ॥ ಟಿ.ಕೆ. ಕೆಂಪೇಗೌಡ | | ಸಹಾಯಕ ಪ್ರಾಧ್ಯಾಪಕರು |

### ೨ ಜಾನಪದ ವಿಭಾಗ

| | | |
|---|---|---|
| ಡಾ॥ ಹೆಚ್. ಆರ್. ಚೇತನ, | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| ಡಾ॥ ವಿಜಯಲಕ್ಷ್ಮಿ | | ಸಹಾಯಕ ಪ್ರಾಧ್ಯಾಪಕರು |

### ೩ ಸಂಸ್ಕೃತ ವಿಭಾಗ

| | | |
|---|---|---|
| ಡಾ॥ ಎಸ್. ಶಿವರಾಜಪ್ಪ | | ಸಹ ಪ್ರಾಧ್ಯಾಪಕರು(ಒಒಡಿ) |

### ೪ ಹಿಂದಿ ವಿಭಾಗ

| | | |
|---|---|---|
| ಡಾ॥ ನಾಮದೇವ ಮಾರುತಿ ಗೌಡ | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| ಡಾ॥ ಬಸವರಾಜು ಕೆ. ಬಾರಕೇರ | | ಸಹಾಯಕ ಪ್ರಾಧ್ಯಾಪಕರು |

### ೫ ಇಂಗ್ಲಿಷ್ ವಿಭಾಗ

| | | |
|---|---|---|
| ಪ್ರೊ॥ ಅನಿಟ ವಿಮ್ಲ ಬ್ರ್ಯಾಗ್ಸ್ | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| ಡಾ॥ ವೀರಣ್ಣ | | ಸಹ ಪ್ರಾಧ್ಯಾಪಕರು |
| ಶ್ರೀ ಗ್ಯಾವೀನ್ ಜೂಡ ವಿಲ್‌ಸನ್ | | ಸಹ ಪ್ರಾಧ್ಯಾಪಕರು |
| ಡಾ॥ ವೆಂಕಟೇಶ್ ಪಿ | | ಸಹ ಪ್ರಾಧ್ಯಾಪಕರು |
| ಡಾ॥ ಚೈತ್ರ ಎಸ್ ಆರ್ | | ಸಹ ಪ್ರಾಧ್ಯಾಪಕರು |

### ೬ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ

| | | |
|---|---|---|
| ಡಾ॥ ಪ್ರಮೀಳಾ ಬಿ. ಕುನ್ನೂರ್, | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |

### ೭ ತತ್ತ್ವಶಾಸ್ತ್ರ ವಿಭಾಗ

| | | | |
|---|---|---|---|
| ೮ | ***ಇತಿಹಾಸ ವಿಭಾಗ*** | | |
| | ಡಾ॥ ಶ್ರೀಕಂಠ, | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| | ಡಾ॥ ಅರ್.ಡಿ. ಪವಮಾನ | | ಸಹಾಯಕ ಪ್ರಾಧ್ಯಾಪಕರು |
| ೯ | ***ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ*** | | |
| | ಡಾ॥ ಷಣ್ಮುಗಂ | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| | ಡಾ॥ ಪಿ ರಶ್ಮಿ | | ಸಹ ಪ್ರಾಧ್ಯಾಪಕರು |
| | ಡಾ॥ ಬಿ.ಎಸ್. ಚಂದ್ರಶೇಖರ್ | | ಸಹ ಪ್ರಾಧ್ಯಾಪಕರು |
| | ಡಾ॥ ಆರ್. ಸಿದ್ಧರಾಜು | | ಸಹ ಪ್ರಾಧ್ಯಾಪಕರು |
| | ಡಾ॥ ಎಸ್.ಟಿ. ರಾಮಚಂದ್ರ | | ಸಹ ಪ್ರಾಧ್ಯಾಪಕರು |
| | ಡಾ॥ ಎಂ. ಸುರೇಶ್ | | ಸಹ ಪ್ರಾಧ್ಯಾಪಕರು |
| ೧೦ | ***ಭೂಗೋಳಶಾಸ್ತ್ರ ವಿಭಾಗ*** | | |
| | ಡಾ॥ ವಿ.ಎಸ್. ಅಶ್ವತ್ಥನಾರಾಯಣ, | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| | ಡಾ॥ ಹೆಚ್. ಕಮಲ | | ಸಹ ಪ್ರಾಧ್ಯಾಪಕರು |
| | ಡಾ॥ ಬಿ. ಡಿ. ತೇಜೋಮಣಿ | | ಸಹ ಪ್ರಾಧ್ಯಾಪಕರು |
| | ಡಾ॥ ರಾಮು (ಅನ್ಯಕಾರ್ಯನಿಮಿತ್ತ) | | ಸಹಾಯಕ ಪ್ರಾಧ್ಯಾಪಕರು |
| | ಡಾ॥ ಪಿ. ಟಿ. ಭಾರತಿ | | ಸಹಾಯಕ ಪ್ರಾಧ್ಯಾಪಕರು |
| | ಡಾ॥ ಮಂಜುನಾಥ್ ಹೆಚ್. ಆರ್ | | ಸಹಾಯಕ ಪ್ರಾಧ್ಯಾಪಕರು |
| ೧೧ | ***ಸಮಾಜಶಾಸ್ತ್ರ ವಿಭಾಗ*** | | |
| | ಡಾ॥ ಎಂ. ಆರ್. ಪುಟ್ಟಸ್ವಾಮಿ | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| | ಡಾ॥ ಆರ್. ಗೋಪಾಲ್ ರಾಜು | | ಸಹ ಪ್ರಾಧ್ಯಾಪಕರು |
| | ಪ್ರೊ॥ ಎಂ. ಮಂಜುಳ | | ಸಹ ಪ್ರಾಧ್ಯಾಪಕರು |
| | ಡಾ॥ ರೇಖಾ ಕೆ. ಜಾದವ್ | | ಸಹಾಯಕ ಪ್ರಾಧ್ಯಾಪಕರು |
| ೧೨ | ***ರಾಜ್ಯಶಾಸ್ತ್ರ & ಸಾರ್ವಜನಿಕ ಆಡಳಿತ ವಿಭಾಗ*** | | |
| | ಡಾ॥ ಬಿ. ಎನ್. ಯಶೋಧ, | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| | ಡಾ॥ ಜಿ.ಎಚ್. ನಾಗರಾಜ್ | | ಸಹ ಪ್ರಾಧ್ಯಾಪಕರು |
| | ಡಾ॥ ಕೆ. ಎಸ್ ಗೋವಿಂದರಾಜು | | ಸಹ ಪ್ರಾಧ್ಯಾಪಕರು |
| | ಡಾ॥ ಎಂ. ಜಿ. ಹನುಮಂತರಾಜು | | ಸಹಾಯಕ ಪ್ರಾಧ್ಯಾಪಕರು |
| | ಪ್ರೊ॥ ಎಂ. ಪಿ. ಉಮೇಶ | | ಸಹಾಯಕ ಪ್ರಾಧ್ಯಾಪಕರು |
| | ಡಾ॥ ಭಾರತಿ ಹಿರೇಮಠ | | ಸಹಾಯಕ ಪ್ರಾಧ್ಯಾಪಕರು |

**೧೩ *ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ***
***ಪುರಾತತ್ತ್ವ ಶಾಸ್ತ್ರ & ವಸ್ತುಸಂಗ್ರಹಾಲಯ ಶಾಸ್ತ್ರ ವಿಭಾಗ***

| | | |
|---|---|---|
| ಪ್ರೊ॥ ಸಿ. ಇ. ಲೋಕೇಶ | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| ಪ್ರೊ॥ ರೋಹಿತ್ ಈಶ್ವರ್ | | ಸಹಾಯಕ ಪ್ರಾಧ್ಯಾಪಕರು |

**೧೪ *ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಭಾಗ***

**೧೫ *ಮನಶ್ಶಾಸ್ತ್ರ ವಿಭಾಗ***

| | | |
|---|---|---|
| ಡಾ॥ ಲ್ಯಾನ್ಸಿ ಡಿಸೋಜ, | ಮುಖ್ಯಸ್ಥರು | ಸಹ ಪ್ರಾಧ್ಯಾಪಕರು |
| ಡಾ॥ ಮೃದುಲ ಸಿಂಗ್ | | ಸಹ ಪ್ರಾಧ್ಯಾಪಕರು |
| ಪ್ರೊ॥ ಡಿ. ಕೆ. ಶಂಕರಲಿಂಗೇಗೌಡ | | ಸಹಾಯಕ ಪ್ರಾಧ್ಯಾಪಕರು |
| ಡಾ॥ ಹೆಚ್. ಎಂ. ರಾಮಕೃಷ್ಣೇಗೌಡ | | ಸಹಾಯಕ ಪ್ರಾಧ್ಯಾಪಕರು |

**೧೬ *ಮಾನವಶಾಸ್ತ್ರ ವಿಭಾಗ***

**೧೭ *ವಾಣಿಜ್ಯ ವಿಭಾಗ***

| | | |
|---|---|---|
| ಶ್ರೀ. ನಟರಾಜ್ | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |
| ಡಾ॥ ಪ್ರಮೀಳ ಎ.ಸಿ | | ಸಹಾಯಕ ಪ್ರಾಧ್ಯಾಪಕರು |

**೧೮ *ಬಿಬಿಎಂ ವಿಭಾಗ***

| | | |
|---|---|---|
| ಡಾ॥ ಕೆ. ಆನಂದ | ಮುಖ್ಯಸ್ಥರು | ಸಹಾಯಕ ಪ್ರಾಧ್ಯಾಪಕರು |

**ಮೈಸೂರು ವಿಶ್ವವಿದ್ಯಾನಿಲಯ**

# ಮಹಾರಾಜ ಕಾಲೇಜು, ಮೈಸೂರು

## ಆಡಳಿತ ಸಿಬ್ಬಂದಿ

ಪ್ರಾಂಶುಪಾಲರು : **ಡಾ॥ ಬಿ. ನಾಗರಾಜಮೂರ್ತಿ**
ಆಡಳಿತಾಧಿಕಾರಿಗಳು: **ಡಾ॥ ಸಿ. ರಾಮಸ್ವಾಮಿ**

***ಅಧೀಕ್ಷಕರು (ಸಾಮಾನ್ಯ)***

ಶ್ರೀಮತಿ ಗಾಯತ್ರಿ. ಎ

***ಅಧೀಕ್ಷಕರು (ಲೆಕ್ಕಪತ್ರ)***

ರಮಾದೇವಿ ಬಿ ಎನ್

***ಹಿರಿಯ ಸಹಾಯಕರು***

ಉಮೇಶ್ ಚಂದ್ರ ಜಿ

***ಪ್ರಥಮ ದರ್ಜೆ ಗುಮಾಸ್ತರು***

ಶ್ರೀ ಜೆ. ಹೇಮಂತ್
ಶ್ರೀ ಸತೀಶ್ ಬಾಬು ಎಲ್ ಸಿ
ಶ್ರೀ ನಾಗರಾಜು ಬಿ
ಶ್ರೀ ಕೆಂಪೇಗೌಡ ಬಿ

***ದ್ವಿತೀಯ ದರ್ಜೆ ಗುಮಾಸ್ತರು***

ಶ್ರೀ ಮಹದೇವ ಎಸ್. ಬಿ.
ಶ್ರೀಮತಿ ಮಂಜಮ್ಮ ಆರ್
ಶ್ರೀ ಗಣೇಶ ಕೆ
ಶ್ರೀ ಸಿದ್ದಲಿಂಗಮ್ಮ (ಪ್ರಭಾರ)

***ಪ್ರಯೋಗಾಲಯ ಸಹಾಯಕರು***

ಶ್ರೀಮತಿ ಎನ್. ರೇಖಾ

***ಪರಿಚಾರಕರು***

ಶ್ರೀ ಆರ್. ಪದ್ಮನಾಭರಾಜು
ಶ್ರೀ ಪೆರುಮಾಳ್

***ಸೇವಕರು***

ಶ್ರೀ ಶಿವಕುಮಾರ್ ಎಸ್
ಶ್ರೀಮತಿ ಭಾಗ್ಯ
ಶ್ರೀ ಎಂ ಕೃಷ್ಣ
ಶ್ರೀ ನಾಗರಾಜು ಸಿ
ಶ್ರೀಮತಿ ಗೌರಮ್ಮ (ಅನ್ಯಕಾರ್ಯನಿಮಿತ್ತ)

***ತೋಟಗಾರರು***

ಶ್ರೀ ಶಿವಲಿಂಗ

## ೨೦೧೫–೧೬ನೇ ಸಾಲಿನ ಪ್ರಥಮ ಬಿ.ಎ., ಬಿ.ಕಾಂ. ಮತ್ತು ಬಿ.ಬಿ.ಎ. ಪ್ರವೇಶಾತಿ ಸಂಖ್ಯಾಮಿತಿ

| ಕ್ರ.ಮ ಸಂಖ್ಯೆ | ಐಚ್ಛಿಕ ವಿಷಯ ಸಮೂಹ | ಕಾಂಬಿನೇಷನ್ | ಕನ್ನಡ ಮಾಧ್ಯಮ | ಆಂಗ್ಲ ಮಾಧ್ಯಮ | ಒಟ್ಟು ವಿದ್ಯಾರ್ಥಿಗಳು |
|---|---|---|---|---|---|
| 1. | ಹೆಚ್.ಇ.ಕೆ. | H.E.K. | 70 | – | 70 |
| 2. | ಹೆಚ್.ಇ.ಜಿ. | H.E.G | 40 | 20 | 60 |
| 3. | ಹೆಚ್.ಇ.ಪಿ. | H.E.P. | 70 | 35 | 105 |
| 4. | ಹೆಚ್.ಕೆ.ಜೆ. | H.K.J. | 50 | – | 50 |
| 5. | ಹೆಚ್.ಇ.ಹೆಚ್. | H.E.Hindi | 10 | 10 | 20 |
| 6. | ಹೆಚ್.ಇ.ಎಸ್. | H.E.Sanskrit | 10 | 10 | 20 |
| 7. | ಹೆಚ್.ಇ.ಇ. | H.E.E. | – | 40 | 40 |
| 8. | ಎ.ಎಸ್.ಜಿ. | A.S.G | 40 | 30 | 70 |
| 9. | ಎಸ್.ಕೆ.ಎಫ್. | S.K.F. | 30 | – | 30 |
| 10. | ಎ.ಪಿ.ಜಿ. | A.P.G | 40 | – | 40 |
| 11. | ಸಿ.ಪಿ.ಎಸ್. | C.P.S. | 40 | 20 | 60 |
| 12. | ಕೆ.ಎಸ್.ಪಿಎಚ್ಐ. | K.S.Phi. | 40 | – | 40 |
| 13. | ಪಿ.ಜೆ.ಇ. | P.J.E. | – | 30 | 30 |
| 14. | ಹೆಚ್.ಇ.ಕೋ. | H.E.Co. | 40 | – | 40 |
| 15. | ಇ.ಪಿ.ಕೋ. | E.P.Co. | 40 | – | 40 |
| 16. | ಜೆ.ಇ.ಪಿಎಸ್ವೈ. | J.E.Psy. | – | 30 | 30 |
| 17. | ಹೆಚ್ಇಎಎಂ | H.E.A. & M | – | 20 | 20 |
| 18. | ಹೆಚ್.ಕೆ.ಎಲ್. | H.K.L. | 30 | – | 30 |
| 19. | ಕೆ.ಎಸ್.ಎಫ್.ಆರ್ಎಂ | K.S.Frm. | 20 | – | 20 |
| 20. | ಸಿ.ಪಿ.ಜೆ. | C.P.J. | – | 30 | 30 |
| 21. | ಬಿ.ಕಾಂ. ಕೋರ್ಸ್ | B.Com. | – | 240 | 240 |
| 22. | ಬಿ.ಬಿ.ಎಂ. ಕೋರ್ಸ್ | B.B.M. | – | 160 | 160 |
| | | **ಒಟ್ಟು** | **570** | **710** | **1285** |

**ಸೂಚನೆ :** ಕಾಲೇಜಿನ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಮೊತ್ತ (2) ವಿವಿಧ ವಿಷಯ ಸಮೂಹಗಳ ಒಟ್ಟು ಮೊತ್ತ, (3) ಕಾಲೇಜಿನ ಮೂಲ ಸೌಕರ್ಯ (4) ಕಾಲೇಜು ಪ್ರವೇಶಾತಿ ಸಮಿತಿಯ ನಿರ್ಣಯ, (5) ವಿ.ವಿ. ಅನುಮೋದನೆ ಮತ್ತು (6) ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯು.ಜಿ.ಸಿ) ನಿಯಮ ಇತ್ಯಾದಿಗಳನ್ನು ಅವಲಂಬಿಸಿ ಪ್ರವೇಶಾತಿ ಸಂಖ್ಯಾಮಿತಿಯಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳಿವೆ.

## ಶುಲ್ಕವಿವರ ೨೦೧೮-೧೯
## ಪ್ರಥಮ ವರ್ಷ ಬಿ.ಎ., ಪ್ರಯೋಗಾಲಯ ಸಹಿತ

| ಕ್ರ.ಸಂ | ವಿವರ | ಸಾಮಾನ್ಯ | CAT-I,IIA,IIIA & IIIB |
|---|---|---|---|
| 1. | ಪ್ರವೇಶಾತಿ ಶುಲ್ಕ | 200 | 200 |
| 2. | ನೋಂದಣಿ ಶುಲ್ಕ | 1100 | 1100 |
| 3. | ಬೋಧನಾ ಶುಲ್ಕ | 2000 | 0 |
| 4. | ವೈದ್ಯಕೀಯ | 70 | 70 |
| 5. | ಗ್ರಂಥಾಲಯ | 120 | 0 |
| 6. | ಎಸ್.ಡಬ್ಲ್ಯು.ಟಿ | 80 | 80 |
| 7. | ವಿದ್ಯಾರ್ಥಿಯ ಸಹಾಯ ನಿಧಿ | 100 | 100 |
| 8. | ಪಠ್ಯೇತರ ಚಟುವಟಿಕೆ | 160 | 160 |
| 9. | ಕ್ರೀಡೆ ಅಭಿವೃದ್ಧಿ | 150 | 150 |
| 10. | ಮೂಲ ಸೌಕರ್ಯಗಳು | 300 | 300 |
| 11. | ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿಕೇಂದ್ರ | 60 | 60 |
| 12. | ವಿದ್ಯಾರ್ಥಿಯ ಕ್ಷೇಮನಿಧಿ | 30 | 30 |
| 13. | ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಶುಲ್ಕ | 750 | 750 |
| 14. | ಕಂಪ್ಯೂಟರ್ ಅಭಿವೃದ್ಧಿ ಶುಲ್ಕ | 800 | 800 |
| 15. | ರಾಷ್ಟ್ರೀಯ ಸೇವಾಯೋಜನೆ | 30 | 30 |
| 16. | ವಾಚನಾಲಯ | 90 | 90 |
| 17. | ಕ್ರೀಡೆ | 180 | 0 |
| 18. | ಕಾಲೇಜು ಅಭಿವೃದ್ಧಿ | 200 | 200 |
| 19. | ಸಾಹಿತ್ಯದ ಮತ್ತು ಸಾಂಸ್ಕೃತಿಕ | 80 | 80 |
| 20. | ಕಾಲೇಜು ವಾರ್ಷಿಕ ಸಂಚಿಕೆ | 130 | 130 |
| 21. | ಗುರುತಿನ ಚೀಟಿ | 80 | 80 |
| 22. | ರೆಡ್‌ಕ್ರಾಸ್ | 50 | 50 |
| 23. | ಪ್ರಯೋಗಾಲಯ ಶುಲ್ಕ | 600 | 0 |
| | **Total without Lab.** | **7360/-** | **4,460/-** |

**ಟಿಪ್ಪಣಿ:** ಮೇಲ್ಕಂಡ ಶುಲ್ಕಗಳು 2018–19ನೇ ಸಾಲಿನ ವಿಶ್ವವಿದ್ಯಾನಿಲಯ ಪ್ರಕಟಿಸುವ ಅಧಿಸೂಚನೆ / ಸುತ್ತೋಲೆ ಮೇರೆಗೆ ಪರಿಷ್ಕೃತಗೊಳ್ಳಲಿದೆ

## ಶುಲ್ಕವಿವರ ೨೦೧೮-೧೯
## ಪ್ರಥಮ ವರ್ಷ ಬಿ.ಎ., ಪ್ರಯೋಗಾಲಯ ರಹಿತ

| ಕ್ರ.ಸಂ | ವಿವರ | ಸಾಮಾನ್ಯ | CAT-I,IIA,IIIA & IIIB |
|---|---|---|---|
| 1. | ಪ್ರವೇಶಾತಿ ಶುಲ್ಕ | 200 | 200 |
| 2. | ನೋಂದಣಿ ಶುಲ್ಕ | 1100 | 1100 |
| 3. | ಬೋಧನಾ ಶುಲ್ಕ | 1500 | 0 |
| 4. | ವೈದ್ಯಕೀಯ | 70 | 70 |
| 5. | ಗ್ರಂಥಾಲಯ | 120 | 0 |
| 6. | ಎಸ್.ಡಬ್ಲ್ಯು.ಟಿ | 80 | 80 |
| 7. | ವಿದ್ಯಾರ್ಥಿಯ ಸಹಾಯ ನಿಧಿ | 100 | 100 |
| 8. | ಪಠ್ಯೇತರ ಚಟುವಟಿಕೆ | 160 | 160 |
| 9. | ಕ್ರೀಡೆ ಅಭಿವೃದ್ಧಿ | 150 | 150 |
| 10. | ಮೂಲ ಸೌಕರ್ಯಗಳು | 300 | 300 |
| 11. | ವಿಶ್ವವಿದ್ಯಾನಿಲಯ ಉದ್ಯೋಗ ಮಾಹಿತಿಕೇಂದ್ರ | 60 | 60 |
| 12. | ವಿದ್ಯಾರ್ಥಿಯ ಕ್ಷೇಮನಿಧಿ | 30 | 30 |
| 13. | ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಶುಲ್ಕ | 750 | 750 |
| 14. | ಕಂಪ್ಯೂಟರ್ ಅಭಿವೃದ್ಧಿ ಶುಲ್ಕ | 800 | 800 |
| 15. | ರಾಷ್ಟ್ರೀಯ ಸೇವಾಯೋಜನೆ | 30 | 30 |
| 16. | ವಾಚನಾಲಯ | 90 | 90 |
| 17. | ಕ್ರೀಡೆ | 180 | 0 |
| 18. | ಕಾಲೇಜು ಅಭಿವೃದ್ಧಿ | 200 | 200 |
| 19. | ಸಾಹಿತ್ಯದ ಮತ್ತು ಸಾಂಸ್ಕೃತಿಕ | 80 | 80 |
| 20. | ಕಾಲೇಜು ವಾರ್ಷಿಕ ಸಂಚಿಕೆ | 130 | 130 |
| 21. | ಗುರುತಿನ ಚೀಟಿ | 80 | 80 |
| 22. | ರೆಡ್‌ಕ್ರಾಸ್ | 50 | 50 |
| 23. | ಪ್ರಯೋಗಾಲಯ ಶುಲ್ಕ | 600 | 0 |
| | **Total without Lab.** | **6,260/-** | **4,460/-** |

**ಟಿಪ್ಪಣಿ:** ಮೇಲ್ಕಂಡ ಶುಲ್ಕಗಳು 2018–19ನೇ ಸಾಲಿನ ವಿಶ್ವವಿದ್ಯಾನಿಲಯ ಪ್ರಕಟಿಸುವ ಅಧಿಸೂಚನೆ / ಸುತ್ತೋಲೆ ಮೇರೆಗೆ ಪರಿಷ್ಕೃತಗೊಳ್ಳಲಿದೆ

## ಶುಲ್ಕವಿವರ ೨೦೧೮-೧೯
## ಪ್ರಥಮ ವರ್ಷ ಬಿ.ಬಿ.ಎ., ಮತ್ತು ಬಿ.ಕಾಂ.,

| ಕ್ರ.ಸಂ | ವಿವರ | ಸಾಮಾನ್ಯ | CAT-I,IIA,IIIA & IIIB |
|---|---|---|---|
| 1. | ಪ್ರವೇಶಾತಿ ಶುಲ್ಕ | 200 | 200 |
| 2. | ನೋಂದಣಿ ಶುಲ್ಕ | 1100 | 1100 |
| 3. | ಬೋಧನಾ ಶುಲ್ಕ | 2000 | 0 |
| 4. | ವೈದ್ಯಕೀಯ | 70 | 70 |
| 5. | ಗ್ರಂಥಾಲಯ | 120 | 0 |
| 6. | ಎಸ್.ಡಬ್ಲ್ಯು.ಟಿ | 80 | 80 |
| 7. | ವಿದ್ಯಾರ್ಥಿಯ ಸಹಾಯ ನಿಧಿ | 100 | 100 |
| 8. | ಪಠ್ಯೇತರ ಚಟುವಟಿಕೆ | 160 | 160 |
| 9. | ಕ್ರೀಡೆ ಅಭಿವೃದ್ಧಿ ಶುಲ್ಕ | 150 | 150 |
| 10. | ಮಾಹಿತಿ ಶುಲ್ಕ | 300 | 300 |
| 11. | ವಿ.ವಿ ಉದ್ಯೋಗ ಮಾಹಿತಿ ಮಾರ್ಗದರ್ಶನ (EIGB) | 60 | 60 |
| 12. | ವಿದ್ಯಾರ್ಥಿಯ ಕ್ಷೇಮ ನಿದಿ | 30 | 30 |
| 13. | ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಶುಲ್ಕ | 750 | 750 |
| 14. | ಕಂಪ್ಯೂಟರ್ ಲ್ಯಾಬ್ ಅಭಿವೃದ್ಧಿ ಶುಲ್ಕ | 800 | 800 |
| 15. | ರಾಷ್ಟ್ರೀಯ ಸೇವಾಯೋಜನೆ | 30 | 30 |
| 16. | ವಾಚನಾಲಯ | 90 | 90 |
| 17. | ಕ್ರೀಡೆ | 180 | 0 |
| 18. | ಕಾಲೇಜು ಅಭಿವೃದ್ಧಿ | 200 | 200 |
| 19. | ಸಾಹಿತ್ಯದ ಮತ್ತು ಸಾಂಸ್ಕೃತಿಕ | 80 | 80 |
| 20. | ಕಾಲೇಜು ವಾರ್ಷಿಕ ಸಂಚಿಕೆ | 130 | 130 |
| 21. | ಗುರುತಿನ ಚೀಟಿ | 80 | 80 |
| 22. | ರೆಡ್‌ಕ್ರಾಸ್ | 50 | 50 |
| | **Total without Lab.** | **6,760/-** | **4,460/-** |

**ಟಿಪ್ಪಣಿ:** ಮೇಲ್ಕಂಡ ಶುಲ್ಕಗಳು 2018–19ನೇ ಸಾಲಿನ ವಿಶ್ವವಿದ್ಯಾನಿಲಯ ಪ್ರಕಟಿಸುವ ಅಧಿಸೂಚನೆ / ಸುತೋಲೆ ಮೇರೆಗೆ ಪರಿಸ್ಕೃತಗೊಳ್ಳಲಿದೆ

**ವಿಶೇಷ ಶುಲ್ಕ**

| | |
|---|---|
| 1. ಗಡಿನಾಡ ಕನ್ನಡಿಗರಿಗೆ ... | ರೂ 100–00/– |
| 2. ಕರ್ನಾಟಕದ ಹೊರ ರಾಜ್ಯದವರಿಗೆ ... | ರೂ 10,000/– |
| 3. ಹೊರ ದೇಶದವರಿಗೆ ... | ರೂ 15,000/– |
| 4. ಸ್ವ–ಅಧ್ಯಯನ ಶುಲ್ಕ ... | ರೂ 1,500/– |

**ಶುಲ್ಕ ವಿನಾಯತಿಗೆ ಆದಾಯದ ಮಿತಿ**
**ಪರಿಶಿಷ್ಟ ಜಾತಿ/ಪಂಗಡ/ವಿದ್ಯಾರ್ಥಿಗಳಿಗೆ ರೂ. 2,50,000/–**
**IIಎ/IIಬಿ/IIIಎ/IIIಬಿ/ಸಾಮಾನ್ಯ ವಿದ್ಯಾರ್ಥಿಗಳಿಗೆ ರೂ 1,00,000/–**

**ಪಾಕ್ಷಿಕ (Partially) ಸ್ವಯಂ ಆರ್ಥಿಕ ಯೊಜನೆ (ಸೆಲ್ಫ್ ಫೈನಾನ್ಸ್ ಸ್ಕೀಂ) (ಸ್ಕೀಂ ಬಿ)**

| | | |
|---|---|---|
| ಪ್ರಥಮ ಬಿ.ಎ., | ರೂ 10,000/-ಮತ್ತು ಶುಲ್ಕಗಳು | ಪರಿಶಿಷ್ಟ ಜಾತಿ/ಪಂಗಡ/ಕ್ಯಾಟಗರಿI ವಿದ್ಯಾರ್ಥಿಗಳಿಗೆ ಇದೆ 50% ರೂ ಮತ್ತು ಶುಲ್ಕಗಳು |
| ಪ್ರಥಮ ಬಿ.ಕಾಂ., | ರೂ 16,000/- ಮತ್ತು ಶುಲ್ಕಗಳು | |
| ಪ್ರಥಮ ಬಿ.ಬಿ.ಎ., | ರೂ 16,000/- ಮತ್ತು ಶುಲ್ಕಗಳು | |

**ಪ್ರವೇಶಾತಿ ವರ್ಗಾವಣೆ ಶುಲ್ಕ – ರೂ. 2,000/-**
**ಮರು ಪ್ರವೇಶಾತಿ ಶುಲ್ಕ – ರೂ. 2,000/–**

**ಟಿಪ್ಪಣಿ:** ಮೇಲ್ಕಂಡ ಶುಲ್ಕಗಳು 2018–19ನೇ ಸಾಲಿನ ವಿಶ್ವವಿದ್ಯಾನಿಲಯ ಪ್ರಕಟಿಸುವ ಅಧಿಸೂಚನೆ / ಸುತೋಲೆ ಮೇರೆಗೆ ಪರಿಕೃತಗೊಳ್ಳಲಿದೆ

# ಮೈಸೂರು ವಿಶ್ವವಿದ್ಯಾನಿಲಯ

## ಪದವಿ ಕೋರ್ಸುಗಳ 2018–19ರ ಸಾಲಿನ ಶೈಕ್ಷಣಿಕ ಕ್ಯಾಲೆಂಡರ್

| | | |
|---|---|---|
| 01 | ಕಾಲೇಜುಗಳ ಪುನರಾಂಭ | 01-06-2018 |
| 02 | ಎಲ್ಲ ಬೆಸ () ಸೆಮಿಸ್ಟರ್ ತರಗತಿಗಳ ಆರಂಭ | 11-06-2018 |
| 03 | ಮೊದಲ ಸೆಮಿಸ್ಟರ್‌ಗೆ ಪ್ರವೇಶಾತಿಗೆ ಕೊನೆಯ ದಿನಾಂಕ | 25-06-2018 |
| 04 | ದಂಡ ಶುಲ್ಕ ಸಹಿತ ಪ್ರಥಮ ಸೆಮಿಷ್ಟರ್ ಪ್ರವೇಶಾತಿಗೆ ಕೊನೆಯ ದಿನಾಂಕ | 30-06-2018 |
| 05 | ಬೆಸ ಸೆಮಿಷ್ಟರ್‌ಗಳ ಕಾರ್ಯದ ಕೊನೆಯ ದಿನಾಂಕ | 12-10-2018 |
| 06 | ಮಧ್ಯಂತರ ರಜೆ (ಪರೀಕ್ಷೆ ಮತ್ತು ಮೌಲ್ಯ ಮಾಪನವೂ ಸೇರಿದಂತೆ) | 13-10-2018<br>to<br>22-11-2018 |
| 07 | ಎಲ್ಲ ಬೆಸ ಸೆಮಿಸ್ಟರ್ ಪರೀಕ್ಷೆಗಳ ಆರಂಭ | 22-10-2018 |
| 08 | ಎಲ್ಲ ಸಮ ಸೆಮಿಸ್ಟರ್ ತರಗತಿಗಳ ಆರಂಭ | 23-11-2018 |
| 09 | ಸಮ ಸೆಮಿಸ್ಟರ್‌ಗಳ ಕಾರ್ಯದ ಕೊನೆಯ ದಿನಾಂಕ | 23-03-2019 |
| 10 | ಬೇಸಿಗೆ ರಜ (ಪರೀಕ್ಷೆ ಮತ್ತು ಮೌಲ್ಯ ಮಾಪನವೂ ಸೇರಿದಂತೆ) | 25-03-2019<br>to<br>30-05-2019 |
| 11 | ಎಲ್ಲ ಸಮ ಸೆಮಿಸ್ಟರ್ ಪರೀಕ್ಷೆಗಳ ಆರಂಭ | 01-04-2019 |
| 12 | **2019–20ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಪುನರಾರಂಭ** | 01-06-2019 |

ಕೆ.ಸಂ. ೨೮೨೧–ಎಂಯುಪಿಎಂ–೧,೦೦೦ ಪ್ರತಿಗಳು–೧೦–೦೩–೨೦೧೭